# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಏಪ್ರಿಲ್ 17, 2023

ಸಂಪುಟ : 49 ಸಂಚಿಕೆ : 335 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ಚಿತ್ರಕಲಾ ಸ್ಪರ್ಧೆ** ದಾವಣಗೆರೆ ಶಿವಯೋಗಿ ಮಂದಿರದ ಸಭಾಂಗಣದಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವದ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಮಕ್ಕಳು, ಯುವಕ, ಯುವತಿಯರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

# ಬಂಡಾಯ ಶಮನ ಸವಾಲು

## ಎರಡು ಡಜನ್ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಬಂಡಾಯ

ಬೆಂಗಳೂರು, ಏ. 16 – ವಿಧಾನಸಭಾ ಚುನಾವಣೆ ಟಿಕೆಟ್ ಹಂಚಿಕೆಯಿಂದ ಆಗಿರುವ ಬಂಡಾಯದ ಬೆಂಕಿ ಶಮನಗೊಳಿಸುವುದು ಬಿಜೆಪಿ ನಾಯಕತ್ವಕ್ಕೆ ದೊಡ್ಡ ಸವಾಲಾಗಿದೆ. ಬಿಜೆಪಿಯ ಪ್ರತಿಯೊಂದು ಪಟ್ಟಿ ಬಿಡುಗಡೆಯೂ ಬಂಡಾಯದ ಬೆಂಕಿಗೆ ಕಾವು ನೀಡುತ್ತಿದೆ.

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಟಿಕೆಟ್ ನಿರಾಕರಣೆಯಿಂದ ಅಸಮಾಧಾನಗೊಂಡು ಪಕ್ಷ ತೊರೆದಿದ್ದಾರೆ. ಇದು ಪಕ್ಷಕ್ಕೆ ಆಘಾತ ನೀಡಿದೆ.

ಅಭ್ಯರ್ಥಿಗಳ ಘೋಷಣೆ ನಂತರ ಉಂಟಾಗಿರುವ ಅಸಮಾಧಾನ ಚಿಂತೆಗೆ ಕಾರಣವಾಗಿದೆ ಎಂದು ಪಕ್ಷದ ನಾಯಕರು ಖಾಸಗಿಯಾಗಿ ಒಪ್ಪಿಕೊಳ್ಳುತ್ತಿದ್ದಾರೆ.

ಬಿಜೆಪಿ ಇದುವರೆಗೆ 224 ಕ್ಷೇತ್ರಗಳ ಪೈಕಿ 212 ಕ್ಷೇತ್ರಗಳ ಅಭ್ಯರ್ಥಿಗಳನ್ನು ಎರಡು ಪಟ್ಟಿಯಲ್ಲಿ ಪ್ರಕಟಿಸಿದೆ. ಎರಡು ಡಜನ್ ವಿಧಾನಸಭಾ ಕ್ಷೇತ್ರಗಳಲ್ಲಿ ಬಂಡಾಯ ಕಂಡು ಬಂದಿದೆ.

ಭಾನುವಾರ ಪತ್ರಿಕಾಗೋಷ್ಠಿ ನಡೆಸಿರುವ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ, ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯ ಚುನಾವಣಾ ಉಸ್ತುವಾರಿಯೂ ಆದ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಮುಖ್ಯಮಂತ್ರಿ ಬಸವರಾಜ (3ನೇ ಪುಟಕ್ಕೆ)

## ಶೆಟ್ಟರ್‌ಗೆ ಕೇಂದ್ರ ಸಚಿವ ಸ್ಥಾನ ಪ್ರಸ್ತಾಪಿಸಲಾಗಿತ್ತು

### ಪಕ್ಷಕ್ಕೆ ಗೌರವ ನೀಡದೇ ಹೋಗಿರುವುದು ಅಕ್ಷಮ್ಯ : ಯಡಿಯೂರಪ್ಪ

ಬೆಂಗಳೂರು ಏ. 16- ವಿಧಾನಸಭಾ ಚುನಾವಣೆಗೆ ಟಿಕೆಟ್ ನಿರಾಕರಿಸಿರುವ ಬಗ್ಗೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಜಗದೀಶ್ ಶೆಟ್ಟರ್ ಪರಸ್ಪರ ವಾಗ್ದಾಳಿ ನಡೆಸಿದ್ದಾರೆ.

ಪಕ್ಷ ಹಲವು ಅವಕಾಶಗಳು, ಸ್ಥಾನಮಾನಗಳನ್ನು ನೀಡಿದ್ದರೂ ಪಕ್ಷಕ್ಕೆ ಮರ್ಯಾದೆ, ಗೌರವ ನೀಡದೆ, ಸಿದ್ಧಾಂತವನ್ನು ಮರೆತು ಹೋಗಿರುವುದು ಅಕ್ಷಮ್ಯ ಅಪರಾಧ. ಈ ನಾಡಿನ ಜನತೆ ಜಗದೀಶ್ ಶೆಟ್ಟರ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿಯವರನ್ನು ಒಪ್ಪುವುದಿಲ್ಲ ಎಂದು ಬಿ. ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಶೆಟ್ಟರ್, ದಶಕದ ಹಿಂದೆ ಯಡಿಯೂರಪ್ಪ ಏಕೆ ಬಿಜೆಪಿ ಬಿಟ್ಟು ಕರ್ನಾಟಕ ಜನತಾ ಪಕ್ಷ ಕಟ್ಟಿದ್ದರು? ಎಂದು ಪ್ರಶ್ನಿಸಿದ್ದಾರೆ.

ಯಡಿಯೂರಪ್ಪನವರಿಗೂ ಉತ್ತಮ ಸ್ಥಾನ ನೀಡಲಾಗಿತ್ತು ಅವರೇಕೆ ಬಿಜೆಪಿ ತೊರೆದರು? ಎಂದು ಪ್ರಶ್ನಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಯಡಿಯೂರಪ್ಪ, ಶೆಟ್ಟರ್‌ಗೆ ಏನು ಅನ್ಯಾಯ ಆಗಿದೆ? ಅವರಿಗೆ ರಾಜ್ಯಸಭಾ ಸ್ಥಾನ ನೀಡುತ್ತೇವೆ





ಹಾಗೂ ಕೇಂದ್ರ ಸಚಿವರನ್ನಾಗಿ ಮಾಡುತ್ತೇವೆ ಎಂದು ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಅವರೇ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷಕ್ಕೆ ಗೌರವ ಕೊಡಬೇಕಾದ್ದು ಶೆಟ್ಟರ್ ಕರ್ತವ್ಯ ಎಂದರು.

ಅವರು ನಿವೃತ್ತಿಯಾಗಬೇಕು ಎಂದು ಯಾರೂ ಹೇಳಿಲ್ಲ. ಕೇಂದ್ರ ಸಚಿವರಾಗಿ ಎಂದು ಹೇಳಿದ್ದೇವೆ. ಆದರೆ, ಅವರು ಕಾಂಗ್ರೆಸ್‌ಗೆ ಹೋಗಬೇಕು ಎಂದು ಈಗಾಗಲೇ ತೀರ್ಮಾನಿಸಿದ್ದಾರೆ. ಅವರ ನಿಲುವು ಸರಿಯಲ್ಲ, ರಾಜ್ಯದ ಜನ ಒಪ್ಪುವುದಿಲ್ಲ ಎಂದರು.

ಇದಕ್ಕೂ ಮುಂಚೆ ಜಗದೀಶ್ ಶೆಟ್ಟರ್ ಅವರು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. (3ನೇ ಪುಟಕ್ಕೆ)

# ಬಿ.ಎಸ್.ಎಫ್.ನ ಅಸಿಸ್ಟೆಂಟ್ ಕಮಾಂಡೆಂಟ್ ನಗರದ ಮೃದುಲಾ

ದಾವಣಗೆರೆ, ಏ. 16 – ದಾವಣಗೆರೆಯವರಾದ ಡಾ. ಎಂ.ಎಲ್. ಮೃದುಲ ಅವರು ಗಡಿ ಭದ್ರತಾ ಪಡೆಯ (ಬಿ.ಎಸ್.ಎಫ್.) ಅಸಿಸ್ಟೆಂಟ್ ಕಮಾಂಡೆಂಟ್ ಆಗಿರುವುದಷ್ಟೇ ಅಲ್ಲದೇ, ಗ್ವಾಲಿಯರ್‌ನ ಬಿ.ಎಸ್.ಎಫ್. ಅಕಾಡೆಮಿಯಲ್ಲಿ ಪಾಸಿಂಗ್ ಪರೇಡ್‌ನ ಕಮಾಂಡರ್ ಆಗುವ ಮೂಲಕ ನಗರಕ್ಕೆ ಹೆಮ್ಮೆ ತಂದಿದ್ದಾರೆ.

ಕಳೆದ ಶನಿವಾರದಂದು ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿರುವ ಬಿ.ಎಸ್.ಎಫ್. ಅಕಾಡೆಮಿ ಟೆಕಾನ್‌ಪುರ್‌ನಲ್ಲಿ ಪಾಸಿಂಗ್ ಪರೇಡ್ ಆಯೋಜಿಸಲಾಗಿತ್ತು. ಆರು ತಿಂಗಳ ತರಬೇತಿ ನಂತರ ಅವರು ಅಸಿಸ್ಟೆಂಟ್ ಕಮಾಂಡೆಂಟ್ ಆಗಿ ನೇಮಕಗೊಂಡಿದ್ದಾರೆ.

ಡಾ. ವಿಜಯಶ್ರೀ ಎಲ್ಲಪ್ಪ ಹಾಗೂ ಲಿಂಗರಾಜು ಅವರ ಏಕೈಕ ಪುತ್ರಿಯಾಗಿರುವ ಮೃದುಲ, ನಗರದ ಅನುಭವ ಮಂಟಪದಲ್ಲಿ 7ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದರು. ತಾಯಿ ವಿಜಯಶ್ರೀ ಅವರು ಮೊದಲು



**ಗಡಿ ಭದ್ರತಾ ಪಡೆ ಅಕಾಡೆಮಿಯಲ್ಲಿ ಪರೇಡ್ ಕಮಾಂಡರ್ ಆಗಿ ಕಾರ್ಯನಿರ್ವಹಣೆ**

ಡಬ್ಲ್ಯೂ.ಹೆಚ್.ಒ.ದಲ್ಲಿ, ನಂತರ ನೀತಿ ಆಯೋಗದಲ್ಲಿ ಕಾರ್ಯನಿರ್ವಹಿಸಲು ಬೆಂಗಳೂರಿಗೆ ತೆರಳಿದ್ದರು. ಈ ಹಿನ್ನೆಲೆಯಲ್ಲಿ ಮುಂದಿನ ವ್ಯಾಸಂಗವನ್ನು ಬೆಂಗಳೂರಿನಲ್ಲಿ ಕೈಗೊಂಡು, ನಂತರ ಕೋಲಾರದಲ್ಲಿ ವೈದ್ಯಕೀಯ ಪದವಿ ಪಡೆದಿದ್ದರು.

ವೈದ್ಯಕೀಯ ಪದವಿ ಪೂರೈಸಿದರೂ ಸಹ, ಮೃದುಲ ಅವರಿಗೆ ಸೈನ್ಯದಲ್ಲಿ ಕಾರ್ಯನಿರ್ವಹಿಸುವ ಬಯಕೆ ಇತ್ತು. ಈ ಹಿನ್ನೆಲೆಯಲ್ಲಿ ಅವರು ಬಿ.ಎಸ್.ಎಫ್.ನ ಅಸಿಸ್ಟೆಂಟ್ ಕಮಾಂಡೆಂಟ್ ಹುದ್ದೆಯ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾದರು. ಆರು ತಿಂಗಳ ಕಾಲ ಬಿ.ಎಸ್.ಎಫ್. ಅಕಾಡೆಮಿಯಲ್ಲಿ ತರಬೇತಿ ಪಡೆದ ನಂತರ ಈಗ ಅವರು ಗಡಿ ಭದ್ರತಾ ಪಡೆಗೆ ಸೇರ್ಪಡೆಯಾಗಿದ್ದಾರೆ.

ಮೃದುಲ ಅವರು ಈಗಲೂ ದಾವಣಗೆರೆಯವರೆಂದೇ ಗುರುತಿಸಿಕೊಳ್ಳುತ್ತಾರೆ. ಹೀಗಾಗಿ (4ನೇ ಪುಟಕ್ಕೆ)

## ಸಿ.ಬಿ.ಐ.ನಿಂದ ಕೇಜ್ರಿವಾಲ್ ವಿಚಾರಣೆ

ನವದೆಹಲಿ, ಏ. 16 – ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಾರ್ಟಿ ನಾಯಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಸಿ.ಬಿ.ಐ. ಒಂಭತ್ತು ಗಂಟೆ ಕಾಲ ವಿಚಾರಣೆಗೆ ಒಳಪಡಿಸಿದೆ.

ಬೆಳಿಗ್ಗೆ 11 ಗಂಟೆಗೆ ಸಿ.ಬಿ.ಐ. ಕೇಂದ್ರ ಕಚೇರಿಯಲ್ಲಿ ವಿಚಾರಣೆ ಆರಂಭವಾಗಿತ್ತು. ರಾತ್ರಿ 8.30ಕ್ಕೆ ವಿಚಾರಣೆ ಪೂರ್ಣಗೊಳಿಸಲಾಯಿತು. ನಂತರ ಪತ್ರಕರ್ತರೊಂದಿಗೆ ಮಾತನಾಡಿದ (4ನೇ ಪುಟಕ್ಕೆ)

# ಹೋಮಿಯೋಪತಿ ಜನಪ್ರಿಯವಾಗಲಿ

## ಆಯುಷ್ ಕೇಂದ್ರಗಳಲ್ಲಿ ಹೋಮಿಯೋಪತಿ ಚಿಕಿತ್ಸೆಗೆ ಡಾ. ಪ್ರಭಾ ಕರೆ



ದಾವಣಗೆರೆ, ಏ. 16 – ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಯುಷ್ ಕೇಂದ್ರಗಳಲ್ಲಿ ಹೋಮಿಯೋಪತಿ ಚಿಕಿತ್ಸೆ ನೀಡುವ ಮತ್ತು ಹಳ್ಳಿಗಳಲ್ಲಿ ನಿಯಮಿತವಾಗಿ ಚಿಕಿತ್ಸಾ ಶಿಬಿರಗಳನ್ನು ಆಯೋಜಿಸುವ ಮೂಲಕ ಹೋಮಿಯೋಪತಿ ಚಿಕಿತ್ಸೆಯನ್ನು ಇನ್ನಷ್ಟು ಜನಪ್ರಿಯಗೊಳಿಸಬಹುದಾಗಿದೆ ಎಂದು ಬಾಪೂಜಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ನಗರದ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ದಾವಣಗೆರೆ ಹೋಮಿಯೋಪತಿ ವೈದ್ಯಕೀಯ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ ಒಂದು ದಿನದ ವಿಚಾರ ಸಂಕಿರಣದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಹೋಮಿಯೋಪತಿ ಚಿಕಿತ್ಸಾ ಪದ್ಧತಿಯು ಅಲರ್ಜಿ ಹಾಗೂ ಅಸ್ತಮಾಗೆ ಲಾಭದಾಯಕ ಎಂದು ಈ ವಿಭಾಗದ ವೈದ್ಯರು ತಿಳಿಸುತ್ತಾರೆ. ಹೋಮಿಯೋಪತಿ (2ನೇ ಪುಟಕ್ಕೆ)

# ಶ್ರೀ ಅಂಬಾಭವಾನಿ ಅರ್ಬನ್ ಬ್ಯಾಂಕಿಗೆ 34 ಲಕ್ಷ ರೂ. ಲಾಭ



**ಅಧ್ಯಕ್ಷ ಎ. ಕಿರಣ್ ಕುಮಾರ್ ಸಂತಸ**

ದಾವಣಗೆರೆ, ಏ.16- ನಗರದ ಹೆಸರಾಂತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, 2023ರ ಮಾರ್ಚ್ ಅಂತ್ಯಕ್ಕೆ 33.76 ಲಕ್ಷ ರೂ. ಗಳಿಗೂ ಹೆಚ್ಚು ಲಾಭ ಗಳಿಸಿದೆ ಎಂದು ಹಿರಿಯ ಲೆಕ್ಕಪರಿಶೋಧಕರೂ ಆಗಿರುವ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎ. ಕಿರಣ್ ಕುಮಾರ್ ತಿಳಿಸಿದ್ದಾರೆ.

ಬ್ಯಾಂಕಿನ ಒಟ್ಟು ಲಾಭದಲ್ಲಿ ಆದಾಯ ತೆರಿಗೆ ಮತ್ತು ಇತರೆ ನಿಧಿಗಳಿಗೆ ಅವಕಾಶ ಕಲ್ಪಿಸಿದ ನಂತರ 25.26 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಒಟ್ಟಿನಲ್ಲಿ ಗಣನೀಯವಾಗಿ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಆರ್ಥಿಕ ವರ್ಷ 2022-23 ನೇ ಸಾಲು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ತಮ್ಮ ಬ್ಯಾಂಕಿನ ಪ್ರಗತಿ ಕುರಿತಂತೆ ಬ್ಯಾಂಕಿನ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಆಡಳಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನತೆಯ ಆರ್ಥಿಕ ಬೆಳವಣಿಗೆಯ ಆಶೋತ್ತರಗಳನ್ನು ಗಮನದಲ್ಲಿರಿಸಿಕೊಂಡು 1996-1997ರಲ್ಲಿ ಸ್ಥಾಪಿಸಿದ ಈ ಬ್ಯಾಂಕ್, ಈಗ ಹೆಮ್ಮರವಾಗಿದ್ದು, ಅದರಡಿಯಲ್ಲಿ ಬಹಳಷ್ಟು ಜನ ತಮ್ಮ (3ನೇ ಪುಟಕ್ಕೆ)

# ಶೆಟ್ಟರ್ ಇಂದು ಕಾಂಗ್ರೆಸ್‌ಗೆ ಸೇರುವ ಸಾಧ್ಯತೆ



ಬೆಂಗಳೂರು, ಏ. 16 – ಕಾಂಗ್ರೆಸ್ ಹಿರಿಯ ನಾಯಕರ ಜೊತೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಾತುಕತೆ ನಡೆಸಿದ್ದು, ನಾಳೆ ಸೋಮವಾರ ಕಾಂಗ್ರೆಸ್‌ಗೆ ಸೇರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಶೆಟ್ಟರ್ ಅವರು ವಿಶೇಷ ಹೆಲಿಕಾಪ್ಟರ್‌ನಲ್ಲಿ ಹುಬ್ಬಳ್ಳಿಯಿಂದ ಬೆಂಗಳೂರು ತಲುಪಿದ್ದಾರೆ. ಅವರು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಂ.ಬಿ. ಪಾಟೀಲ್ ಜೊತೆ ಚರ್ಚೆ ನಡೆಸಿದ್ದಾರೆ.

ಆರು ಬಾರಿ ಹುಬ್ಬಳ್ಳಿ - ಧಾರವಾಡ ಸೆಂಟ್ರಲ್ ಕ್ಷೇತ್ರದ ಶಾಸಕರಾಗಿದ್ದ ಶೆಟ್ಟರ್‌ಗೆ ಈ ಬಾರಿ ಬಿಜೆಪಿಯಿಂದ ಟಿಕೆಟ್ ದೊರೆತಿರಲಿಲ್ಲ. ಇದರಿಂದ ಅಸಮಾಧಾನಗೊಂಡಿದ್ದ ಅವರು, ಶಾಸಕ ಸ್ಥಾನ ಹಾಗೂ ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ.

# ಪಂಚಮಸಾಲಿ ಸಮಾಜದ ಮುಖಂಡ ಲೋಕೇಶ್ ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಏ.16- ನಗರದ ಪಂಚಮಸಾಲಿ ಸಮಾಜದ ಹಿರಿಯ ಮುಖಂಡರೂ, ಮಹಾನಗರ ಪಾಲಿಕೆಯ ಮಾಜಿ ಉಪ ಮಹಾಪೌರರೂ, ಶಕ್ತಿ ಗ್ಯಾಸ್ ಏಜೆನ್ಸಿ ಮಾಲೀಕರೂ ಆದ ಬಿ. ಲೋಕೇಶ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷವನ್ನು ಸೇರಿದ್ದಾರೆ.

ಮಾಜಿ ಸಚಿವರೂ ಆಗಿರುವ ದಾವಣಗೆರೆ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಸ್ವತಃ ಬಿ. ಲೋಕೇಶ್ ಅವರ ನಿವಾಸಕ್ಕೆ ತೆರಳಿ ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. (4ನೇ ಪುಟಕ್ಕೆ)

# ಹರಪನಹಳ್ಳಿ ಕ್ಷೇತ್ರಕ್ಕೆ ಬಂಡಾಯ ಅಭ್ಯರ್ಥಿಯಾಗಿ ಎಂ.ಪಿ. ಲತಾ



ಹರಪನಹಳ್ಳಿ, ಏ.16- ಕಾಂಗ್ರೆಸ್ ಪಕ್ಷದ ಟಿಕೆಟ್ ಕೈ ತಪ್ಪಿದ ಹಿನ್ನೆಲೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಬಂಡಾಯ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಲು ಭಾನುವಾರ ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಘೋಷಿಸಿದ್ದಾರೆ.

ಪಟ್ಟಣದ ಕಾಶಿ ಬಡಾವಣೆಯ ಅವರ ಕಚೇರಿ ಆವರಣದಲ್ಲಿ ಸ್ವಾಭಿಮಾನಿ ಸಮಾನ ಮನಸ್ಕರ ಸಭೆಯಲ್ಲಿ ಸೇರಿದ್ದ ಅನೇಕ ಅಭಿಮಾನಿಗಳು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ನಾವಿದ್ದೇವೆ ಎಂದು ತಾಕೀತು ಮಾಡಿದರು.

ಪಕ್ಷೇತರರಾಗಿ ಗೆದ್ದು ಕಾಂಗ್ರೆಸ್ ಹೈಕಮಾಂಡ್‌ಗೆ ಪಾಠ ಕಲಿಸಬೇಕು ಎಂದು ಅಭಿಮಾನಿಗಳು ಒತ್ತಾಯಿಸಿದರು. ಆಗ ಎಂ.ಪಿ.ಲತಾ ಮಲ್ಲಿಕಾರ್ಜುನ್ ಮಾತನಾಡಿ, ಈ ಕ್ಷೇತ್ರದಲ್ಲಿ ಐದು ವರ್ಷ ಯಾರಿದ್ದರೂ ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಹರಪನಹಳ್ಳಿ ಸೊಸೆ ಎಂಬುದು ಇಲ್ಲಿನ ಜನರಿಗೆ ಗೊತ್ತಿದೆ ಎಂದರು. ತಂದೆ ಎಂ.ಪಿ.ಪ್ರಕಾಶ್ (4ನೇ ಪುಟಕ್ಕೆ)




# ಅಭಿವೃದ್ಧಿ ಕೆಲಸಗಳೇ ನನ್ನ ಗೆಲುವಿನ ಶ್ರೀರಕ್ಷೆ: ರಾಮಚಂದ್ರ

## ಜಗಳೂರಿನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಎಸ್.ವಿ.ರಾಮಚಂದ್ರ ನಾಮಪತ್ರ ಸಲ್ಲಿಕೆ



ಜಗಳೂರು, ಏ.16- ಬಿಜೆಪಿ ಅಧಿಕೃತ ಅಭ್ಯರ್ಥಿಯಾಗಿ ಬಿ ಫಾರಂನೊಂದಿಗೆ ಸೋಮವಾರ ನಾಮಪತ್ರ ಸಲ್ಲಿಸಲಾಗುವುದು ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದರು.

ಪಟ್ಟಣದಲ್ಲಿನ ಅವರ ನಿವಾಸದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನು ದ್ದೇಶಿಸಿ ಮಾತನಾಡಿದ ಅವರು, ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕೆಲಸಗಳೇ ನನ್ನ ಗೆಲುವಿಗೆ ಶ್ರೀ ರಕ್ಷೆ ಎಂದರು.

ನನ್ನ ಆಡಳಿತಾವಧಿಯಲ್ಲಿ ನನ್ನ ಅಭಿವೃದ್ಧಿ ಕಾಮಗಾರಿ ಮನಗಂಡು ವರಿಷ್ಠರು ನನಗೆ ಟಿಕೆಟ್ ನೀಡಿದ್ದಾರೆ. ಕ್ಷೇತ್ರದ ಜನತೆಯ ಆಶೀರ್ವಾದ ನನ್ನ ಮೇಲಿದೆ. ಈಗಾಗಲೇ ಮೂರು ಬಾರಿ ಗೆದ್ದಿದ್ದೇನೆ. ನಾಲ್ಕನೇ ಬಾರಿ ಮತ್ತೊಮ್ಮೆ ಶಾಸಕನಾಗಿ ಆಯ್ಕೆಯಾಗುವೆ ಎಂದು ರಾಮಚಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಆಡಳಿತಾವಧಿಯಲ್ಲಿ ಬಿಜೆಪಿ ಸರ್ಕಾರದ ಸಹಕಾರದಿಂದ ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ಕೆರೆ ತುಂಬಿಸುವ ಯೋಜನೆಯ ಕಾಮಗಾರಿ ಭರದಿಂದ ಸಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಸಾಕಾರಗೊಂಡು, 45 ಸಾವಿರ ಎಕರೆ ಜಮೀನು ಹಸಿ ನೀರಾವರಿ ಪ್ರದೇಶವಾಗಲಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸಂತೆಮುದ್ದಾಪುರದಿಂದ 164 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆ ಕಾಮಗಾರಿಗೆ ಚಾಲನೆ ಸಿಕ್ಕಿದೆ. ಕ್ಷೇತ್ರದಲ್ಲಿ 190 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ದಿಪಡಿಸಲಾಗಿದೆ. ಪಟ್ಟಣದಲ್ಲಿ ಎರಡು ವಾಲ್ಮೀಕಿ ಸಮುದಾಯ ಭವನ, ತಲಾ 25 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವೆ. ಕೆರೆ ಅಭಿವೃದ್ಧಿ, ಜಲಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನಲ್ಲಿ ನೀರು, ವಸತಿ ರಹಿತ 4078 ಫಲಾನುಭವಿಗಳಿಗೆ ಸೂರು ಕಲ್ಪಿಸಲಾಗಿದೆ. ಸ್ವಯಂ ಉದ್ಯೋಗ, ಆರ್ಥಿಕ ಸಂಪನ್ಮೂಲ, 150 ಪರಿಶಿಷ್ಟ ಸಮುದಾಯಗಳ ಮಹಿಳಾ ಸ್ವಸಹಾಯ ಸಂಘಗಳಿಗೆ ಸಹಾಯ ಧನ, ಅಲೆಮಾರಿ ಸಮುದಾಯಕ್ಕೆ ಸೂರಿನ ವ್ಯವಸ್ಥೆ ಕಲ್ಪಿಸಿರುವೆ. ಮೂರು ಸಾವಿರದ ಐದುನೂರು ಕೋಟಿ ಅನುದಾನ ತಂದಿರುವೆ.

ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಅವರು ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ರಾಮಚಂದ್ರ, ಪಕ್ಷದ ಟಿಕೆಟ್ ತಪ್ಪಿದ್ದರಿಂದ ಹತಾಶರಾಗಿ ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ಅದ್ದಕ್ಕೆ ಪ್ರತಿಕ್ರಿಯಿಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಮುಖಂಡರಾದ ಡಿ.ವಿ.ನಾಗಪ್ಪ, ಸೊಕ್ಕೆ ನಾಗರಾಜ್, ಶಶಿಧರ್, ಎಸ್.ಕೆ.ಮಂಜುನಾಥ್, ಭೀಮಾನಾಯಕ, ಸಿದ್ದೇಶ್, ಮಂಜಣ್ಣ ಉಪಸ್ಥಿತರಿದ್ದರು.

# ಹೋಮಿಯೋಪತಿ ಜನಪ್ರಿಯವಾಗಲಿ



(1ನೇ ಪುಟದಿಂದ) ಚಿಕಿತ್ಸಾ ಪದ್ಧತಿಯನ್ನು ಪ್ರಾಮಾಣಿಕವಾಗಿ ಪಾಲಿಸುವವರು ಇದ್ದಾರೆ ಎಂದು ತಿಳಿಸಿದರು.

ಸುಮಾರು 200 ವರ್ಷಗಳ ಹಿಂದೆ ಆರಂಭವಾದ ಹೋಮಿಯೋಪತಿ ಚಿಕಿತ್ಸಾ ಪದ್ಧತಿಯು ಕನಿಷ್ಠ ಚಿಕಿತ್ಸೆಯ ಮೂಲಕ ರೋಗ ಬಗೆಹರಿಸುವ ಉದ್ದೇಶ ಹೊಂದಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಭಾರತದಲ್ಲಿ ಈಗ 2.5 ಲಕ್ಷ ಹೋಮಿಯೋಪತಿ ವೈದ್ಯರಿದ್ದಾರೆ. ವೈದ್ಯರ ಸಂಖ್ಯೆ ಇನ್ನಷ್ಟು ಹೆಚ್ಚಬೇಕಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಯುಷ್ ಕೇಂದ್ರಗಳಲ್ಲಿ ಹೋಮಿಯೋಪತಿ ವೈದ್ಯರನ್ನು ನಿಯೋಜಿಸಬೇಕಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಹೋಮಿಯೋಪತಿ ವೈದ್ಯಕೀಯ ಒಕ್ಕೂಟದ ಅಧ್ಯಕ್ಷ ಡಾ. ವೀರ ಬ್ರಹ್ಮಾಚಾರಿ, ದಾವಣಗೆರೆಯಲ್ಲಿ ಸುಮಾರು 70 ವರ್ಷಗಳಿಂದ ಹೋಮಿಯೋಪತಿ ಚಿಕಿತ್ಸೆ ನೀಡಲಾಗುತ್ತಿದೆ. ಹೋಮಿಯೋಪತಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಮಾತನಾಡಿ, ಮನಸ್ಸು ಬದಲಾಗದೇ ಆರೋಗ್ಯ ಸಾಧ್ಯವಿಲ್ಲ. ನಿತ್ಯ ಯೋಗ ಹಾಗೂ ಊಟದ ಬಗ್ಗೆ ಕಾಳಜಿ ವಹಿಸಿದರೆ ಉತ್ತಮ ಆರೋಗ್ಯ ಸಾಧ್ಯ ಎಂದು ಹೇಳಿದರು.

ಜಿಲ್ಲಾ ಹೋಮಿಯೋಪತಿ ವೈದ್ಯಕೀಯ ಒಕ್ಕೂಟದ ಗೌರವಾಧ್ಯಕ್ಷ ಡಾ. ಜಿ.ಎಂ. ಮಾವಿಶೆಟ್ಟರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಸಮಾಧಾನ ಕೌನ್ಸೆಲಿಂಗ್ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯ ಡಾ. ಸಿ.ಆರ್. ಚಂದ್ರಶೇಖರ್, ಮಂಗಳೂರಿನ ಫಾದರ್ ಮುಲ್ಲರ್ ಹೋಮಿಯೋಪತಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಮಾನಸಿಕ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಗಿರೀಶ್ ನಾವಡ, ಪೀಕಾಕ್ ಇಂಡಸ್ಟ್ರಿಯ ಗಾಯತ್ರಿ ನಾಗಭೂಷಣ್ ಮತ್ತಿತರರು ಉಪಸ್ಥಿತರಿದ್ದರು.

ಡಾ. ಜಿ.ಎಸ್. ಗಿರೀಶ್ ಸ್ವಾಗತಿಸಿದರೆ, ಭವಾನಿ ಶಂಭುಲಿಂಗಪ್ಪ ಪ್ರಾರ್ಥಿಸಿದರು. ಚೈತ್ರ ಜಿ. ಅವಿನಾಶ್ ನಿರೂಪಿಸಿದರು. ಡಾ. ಎಸ್. ರಂಗರಾಜನ್ ವಂದಿಸಿದರು.

## ವೈದ್ಯಕೀಯ ವಲಯದಲ್ಲೇ ಹೆಚ್ಚಿನ ಮಾನಸಿಕ ಒತ್ತಡ : ಡಾ. ಚಂದ್ರಶೇಖರ್ ವಿಷಾದ

ಮಾನಸಿಕ ಕಾರಣಗಳಿಂದ ದೈಹಿಕ ರೋಗ ಬರುವ ಹಾಗೂ ದೈಹಿಕ ಸಮಸ್ಯೆಗಳಿಂದ ಮಾನಸಿಕ ಅಸ್ವಸ್ಥತೆ ಉಂಟಾಗುವ ಸಾಧ್ಯತೆ ಶೇ.80ರಷ್ಟಿದೆ. ಹೀಗಾಗಿ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ ಎಂದು ಸಮಾಧಾನ ಕೌನ್ಸೆಲಿಂಗ್ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯ ಡಾ. ಸಿ.ಆರ್. ಚಂದ್ರಶೇಖರ್ ಹೇಳಿದರು.

ದುರಾದೃಷ್ಟವೆಂದರೆ ಬೇರೆ ವಲಯಗಳಿಗಿಂತ ವೈದ್ಯಕೀಯ ವಲಯದವರೇ ಹೆಚ್ಚಿನ ಮಾನಸಿಕ ಒತ್ತಡ ಎದುರಿಸುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಂತೂ ವೈದ್ಯರ ಮಾನಸಿಕ ಒತ್ತಡ ಅಪಾರವಾಗಿ ಹೆಚ್ಚಾಗಿತ್ತು ಎಂದವರು ತಿಳಿಸಿದರು. ಸೂಕ್ತ ಮುನ್ನೆಚ್ಚರಿಕೆಯಿಂದ ಮಾನಸಿಕ ಒತ್ತಡದ ಸಮಸ್ಯೆ ತಡೆಯಲು ಸಾಧ್ಯವಿದೆ. ಆದರೆ, ಚಿಕಿತ್ಸೆ ನೀಡಲು ವೈದ್ಯರು ದೊರಕುತ್ತಿದ್ದಾರೆಯೇ ವಿನಃ ರೋಗ ತಡೆಗೆ ಹೆಚ್ಚಿನ ಕಾಳಜಿ ಕಂಡು ಬರುತ್ತಿಲ್ಲ ಎಂದವರು ಹೇಳಿದರು. ಕಳೆದ ವರ್ಷ 1.60 ಲಕ್ಷ ಜನರು ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಲ್ಲಿ ಶೇ.25ರಷ್ಟು ಜನರು ಯುವಕರೇ ಆಗಿದ್ದಾರೆ. ಇದು ಮಾನಸಿಕ ಆರೋಗ್ಯದ ಬಗ್ಗೆ ವಹಿಸಬೇಕಾದ ಕಾಳಜಿಯ ಅಗತ್ಯವನ್ನು ತೋರಿಸುತ್ತದೆ ಎಂದು ಡಾ. ಚಂದ್ರಶೇಖರ್ ಹೇಳಿದರು.

# 25ರಂದು ಉಜ್ಜಿನಿಯಲ್ಲಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ



ಕೊಟ್ಟೂರು, ಏ. 16 - ಉಜ್ಜಿನಿ ರಥೋತ್ಸವದ ಸಂದರ್ಭದಲ್ಲಿ ಇಲಾಖಾಧಿಕಾರಿಗಳಿಗೆ ವಹಿಸಿದ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ತಹಶೀಲ್ದಾರ್ ಎಂ.ಕುಮಾರಸ್ವಾಮಿ ತಿಳಿಸಿದರು.

ತಾಲ್ಲೂಕಿನ ಉಜ್ಜಯಿನಿ ಪೀಠದಲ್ಲಿ ಇದೇ ದಿನಾಂಕ 25 ರ ಮಂಗಳವಾರ ಜರುಗಲಿರುವ ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ರಥೋತ್ಸವ ಹಾಗೂ 26 ರಂದು ಶಿಖರ ತೈಲಾಭಿಷೇಕ ಪ್ರಯುಕ್ತ ಭಾನುವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಾತ್ರಾ ಸಂದರ್ಭದಲ್ಲಿ ಮೂಲ ಸೌಕರ್ಯಗಳ ಕೊರತೆ ಕಂಡಲ್ಲಿ ಸಂಬಂಧಿಸಿದ ಇಲಾಖಾಧಿಕಾರಿಗಳೇ ಹೊಣೆಯಾಗುತ್ತಾರೆ ಎಂದರು.

ಗ್ರಾಮದಲ್ಲಿ ಸ್ವಚ್ಚತೆ, ಬೀದಿ ದೀಪಗಳು ಹಾಗೂ ನೀರಿನ ಪೂರೈಕೆ, ಫಾಗಿಂಗ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಸಿ.ಎಚ್.ಎಂ.ಗಂಗಾಧರಯ್ಯ ಇವರಿಗೆ ಸೂಚಿಸಿದರು. ನಿರಂತರ ವಿದ್ಯುತ್ ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳುವಂತೆ ಜೆಸ್ಕಾಂ ಅಧಿಕಾರಿಗೆ ಸೂಚಿಸಿದರು. ಸುತ್ತಮುತ್ತಲಿನ ಪಟ್ಟಣಗಳಿಂದ ವಿಶೇಷ ಬಸ್ಸುಗಳ ವ್ಯವಸ್ಥೆ ಹಾಗೂ ಗ್ರಾಮದ ಹೊರವಲಯಗಳಲ್ಲಿ ತಾತ್ಕಾಲಿಕ ಬಸ್ ನಿಲ್ದಾಣಗಳನ್ನು ತೆರೆಯುವಂತೆ ಆದೇಶಿಸಿದರು. ಔಷಧಿಗಳ ದಾಸ್ತಾನು ಮಾಡಿಕೊಳ್ಳು ವಂತೆ ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಅಗ್ನಿಶಾಮಕ ವಾಹನಗಳ ವ್ಯವಸ್ಥೆ ಮಾಡಿಕೊಳ್ಳುವಂತೆ ಇಲಾಖಾಧಿಕಾರಿಗೆ ಸೂಚಿಸಿದರು.

ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಮಾತನಾಡಿ, ರಥೋತ್ಸವದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಬಂದೋಬಸ್ತಿಗಾಗಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿಕೊಳ್ಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಿಪಿಐ ವೆಂಕಟಸ್ವಾಮಿ, ಪಿ.ಎಸ್.ಐ. ವೆಂಕಟೇಶ್, ಗ್ರಾಮಸ್ಥರು ಹಾಗೂ ಇಲಾಖಾಧಿಕಾರಿಗಳು ಪಾಲ್ಗೊಂಡಿದ್ದರು.

# ಉಮೇಶ್ ಪಾಲ್ ಹತ್ಯೆ: ಆರು ಆರೋಪಿಗಳ ಹತ

ಲಖ್ನೌ, ಏ. 16- ಉತ್ತರ ಪ್ರದೇಶದ ಉಮೇಶ್ ಪಾಲ್ ಹತ್ಯೆ ಪ್ರಕರಣದಲ್ಲಿ ಆರೋಪಿಗಳಾಗಿರುವ ಆರು ಜನರು ಇದುವರೆಗೂ ಹತರಾಗಿದ್ದಾರೆ. ಗ್ಯಾಂಗ್‌ಸ್ಟರ್ ಅತೀಕ್ ಅಹಮದ್ ಸೇರಿದಂತೆ ಕುಟುಂಬದ ಮೂವರು ಹತ್ಯೆಗೀಡಾಗಿದ್ದಾರೆ.

ಪ್ರಯಾಗ್‌ರಾಜ್‌ನ ಧೂಮನಗಂಜ್ ಪೊಲೀಸ್ ಠಾಣೆಯಲ್ಲಿ ಫೆಬ್ರವರಿ 25ರಂದು ಉಮೇಶ್ ಪಾಲ್ ಹತ್ಯೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿತ್ತು.

ಅತೀಕ್ ಅಹಮದ್ ಮಗ ಅಸಾದ್, ಸಹೋದರ ಅಶ್ರಫ್, ಅರ್ಬಾಜ್, ವಿಜಯ್ ಚೌಧರಿ ಹಾಗೂ ಗುಲಾಂ ಇದುವರೆಗೂ ಹತರಾಗಿದ್ದಾರೆ. ಅತೀಕ್ ಪತ್ನಿ ಶಾಯಿಸ್ತಾ ಪರ್ವೀನ್ ಹಾಗೂ ಇತರೆ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

2005ರಲ್ಲಿ ಶಾಸಕ ರಾಜು ಪಾಲ್ ಹತ್ಯೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಅತೀಕ್ ಅಹಮದ್ ಪ್ರಮುಖ ಆರೋಪಿ. ಪ್ರಕರಣದ ಸಾಕ್ಷಿಯಾಗಿದ್ದ ಉಮೇಶ್ ಪಾಲ್ ಅವರನ್ನು ಫೆಬ್ರವರಿ 27ರಂದು ಹತ್ಯೆ ಮಾಡಲಾಗಿತ್ತು.

ನಂತರ ಗುಂಡಿನ ದಾಳಿ ನಡೆಸಿದ್ದ ವಿಜಯ್ ಚೌಧರಿ ಅಲಿಯಾಸ್ ಉಸ್ಮಾನ್‌ನನ್ನು ಪ್ರಯಾಗ್‌ರಾಜ್‌ನಲ್ಲಿ ಮಾರ್ಚ್ 6ರಂದು ನಡೆಸಲಾದ ಕಾರ್ಯಾಚರಣೆಯಲ್ಲಿ ಹೊಡೆದುರುಳಿಸಲಾಗಿತ್ತು. ನಂತರ ಏಪ್ರಿಲ್ 13ರಂದು ಝೂನ್ಸಿಯಲ್ಲಿ ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆ ನಡೆಸಿದ ಕಾರ್ಯಾಚರಣೆಯಲ್ಲಿ ಅಹಮದ್ ಹಾಗೂ ಗುಲಾಂ ಹತರಾಗಿದ್ದರು.

ಅತೀಕ್ ಹಾಗೂ ಅಶ್ರಫ್ ನಿನ್ನೆ ಪೊಲೀಸರ ಕಸ್ಟಡಿಯಲ್ಲಿದ್ದಾಗ ಮಾಧ್ಯಮದವರ ಸೋಗಿನಲ್ಲಿ ಬಂದವರಿಂದ ಗುಂಡೇಟಿಗೆ ಬಲಿಯಾಗಿದ್ದರು.

ಉಳಿದ ಮೂವರು ಆರೋಪಿಗಳಾಗಿರುವ ಗುಡ್ಡು ಮುಸ್ಲಿಂ, ಸಬೀರ್ ಹಾಗೂ ಅರ್ಮಾನ್ ತಲೆಮರೆಸಿಕೊಂಡಿದ್ದಾರೆ. ಈ ಮೂವರು ಶಾರ್ಪ್ ಶೂಟರ್‌ಗಳಾಗಿದ್ದಾರೆ. ಶಾಯಿಸ್ತಾ ಪರ್ವೀನ್ ಸಹ ಇದುವರೆಗೂ ಪೊಲೀಸರ ಕೈಗೆ ಸಿಕ್ಕಿಲ್ಲ.

# ಬಸವ ಜಯಂತಿ: ಇಂದಿನಿಂದ ಪ್ರಭಾತ್‌ಪೇರಿ



ದಾವಣಗೆರೆ, ಏ.16- 111ನೇ ವರ್ಷದ ಬಸವ ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ವಿರಕ್ತ ಮಠ ಮತ್ತು ಲಿಂಗಾಯತ ತರುಣ ಸಂಘ ಇವರ ಜಂಟಿ ಆಶ್ರಯದಲ್ಲಿ ನಾಳೆ ದಿನಾಂಕ 17ರ ಸೋಮವಾರದಿಂದ ಇದೇ ದಿನಾಂಕ 23ರವರೆಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ವಿರಕ್ತ ಮಠ - ಶ್ರೀ ಶಿವಯೋಗಾಶ್ರಮದ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

ನಾಳೆ ಸೋಮವಾರದಿಂದ ಪ್ರತಿದಿನ ಬೆಳಿಗ್ಗೆ 7.30 ಕ್ಕೆ ನಗರದ ವಿವಿಧ ಬಡಾವಣೆಗಳಲ್ಲಿ ಬಸವ ಪ್ರಭಾತ್ ಪೇರಿ ಜರುಗಲಿದ್ದು, ಈ ಪ್ರಭಾತ್ ಪೇರಿಗೆ ಬಸವ ಕಲಾ ಲೋಕ ಪ್ರತಿನಿತ್ಯ ವಚನ ಭಜನೆ ಸಾಥ್ ನೀಡಲಿದೆ.

ನಾಳೆ ಸೋಮವಾರ ಶ್ರೀ ವಿರಕ್ತ ಮಠದಿಂದ ಆರಂಭವಾಗುವ ಪಾದಯಾತ್ರೆಯು ಶ್ರೀ ಬಕ್ಕೇಶ್ವರ ದೇವಸ್ಥಾನ, ಮಹಾರಾಜಪೇಟೆ, ಗಾಂಧಿ ನಗರ, ಕಾಳಿಕಾದೇವಿ ರಸ್ತೆಯಲ್ಲಿ ಸಂಚರಿಸಲಿದೆ.

ದಿನಾಂಕ 18ರ ಮಂಗಳವಾರ ಸ್ವಾಗೇರ ಪೇಟೆ, ಒಕ್ಕಲಿಗರ ಪೇಟೆ, ಕಾಯಿಪೇಟೆ, ದಿನಾಂಕ 19ರ ಬುಧವಾರ ಮದಕರಿ ನಾಯಕ ವೃತ್ತ, ಜಾಲಿನಗರ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಬಸವ ಪ್ರಭಾತ್ ಪೇರಿ ಸಂಚರಿಸಲಿದೆ.

ದಿನಾಂಕ 20ರ ಗುರುವಾರ ಮದಕರಿ ನಾಯಕ ವೃತ್ತ, ಭಲವಾದಿ ಕೇರಿ, ದಿನಾಂಕ 21ರ ಶುಕ್ರವಾರ ಮದಕರಿ ನಾಯಕ ವೃತ್ತ, ತಳವಾರ ಕೇರಿ, ಕಾಳಿಕಾದೇವಿ ರಸ್ತೆ, ದಿನಾಂಕ 22ರ ಶನಿವಾರ ಕಾಳಿಕಾದೇವಿ ರಸ್ತೆ, ಆನೆಕೊಂಡ ಪೇಟೆ, ಹಳೇಪೇಟೆ, ಎಸ್.ಕೆ.ಪಿ. ರಸ್ತೆಯಿಂದ ವಿರಕ್ತ ಮಠ ತಲುಪಲಿದೆ.

ಬಸವ ಪ್ರಭಾತ್ ಪೇರಿಯಲ್ಲಿ ಭಾಗವಹಿಸಲಿಚ್ಛಿಸುವವರು ವಿವರಕ್ಕೆ ಮೊಬೈಲ್ 96118-89151 ರಲ್ಲಿ ಸಂಪರ್ಕಿಸುವಂತೆ ಲಿಂಗಾಯತ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ಕೋರಿದ್ದಾರೆ.

ಇದೇ ದಿನಾಂಕ 22ರ ಶನಿವಾರ ಸಂಜೆ 4 ಕ್ಕೆ ವಿರಕ್ತ ಮಠದಲ್ಲಿ ಮಕ್ಕಳಿಗಾಗಿ ವಚನ ಸ್ಪರ್ಧೆ ಏರ್ಪಡಿಸಲಾಗಿದೆ.

ದಿನಾಂಕ 23ರ ಭಾನುವಾರ ಬಸವ ಜಯಂತಿ ದಿನದಂದು ಬೆಳಿಗ್ಗೆ 7.30ಕ್ಕೆ ಐತಿಹಾಸಿಕ ಶ್ರೀ ಗುರು ಬಸವಣ್ಣನವರ ಪಲ್ಲಕ್ಕಿ ಉತ್ಸವ, ವಿಶ್ವ ಗುರು ಬಸವಣ್ಣನವರ ಭಾವಚಿತ್ರದೊಂದಿಗೆ, ಬಸವಾದಿ ಶರಣರ ವಚನ ಗ್ರಂಥ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ವಿರಕ್ತಮಠದಿಂದ ಹೊರಟು ಶ್ರೀ ಬಕ್ಕೇಶ್ವರ ದೇವಸ್ಥಾನ, ಹಾಸಬಾವಿ ವೃತ್ತ, ಚಾಮರಾಜಪೇಟೆ, ಕಾಳಿಕಾದೇವಿ ರಸ್ತೆಯಿಂದ ಶ್ರೀ ವಿರಕ್ತಮಠ ತಲುಪಲಿದೆ.

ಬೆಳಿಗ್ಗೆ 9.30ಕ್ಕೆ ನಡೆಯುವ ಶ್ರೀ ಗುರು ಬಸವಣ್ಣನವರ ತೊಟ್ಟಿಲು ಕಾರ್ಯಕ್ರಮದಲ್ಲಿ ಸಣ್ಣ ಮಕ್ಕಳಿಗೆ ನಾಮಕರಣ ಮಾಡಲಾಗುವುದು.

ನಂತರ ಬೆಳಿಗ್ಗೆ 10.30ಕ್ಕೆ, ದೇಶದಲ್ಲೇ ಪ್ರಪ್ರಥಮ ಬಾರಿಗೆ 1913ರಲ್ಲಿ ದಾವಣಗೆರೆ ಶ್ರೀ ವಿರಕ್ತ ಮಠದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ ಯನ್ನು ಪ್ರಾರಂಭಿಸಿದ್ದ ಅಂದಿನ ವಿರಕ್ತ ಮಠಾಧೀಶರಾದ ಲಿಂ. ಶ್ರೀ ಮೃತ್ಯುಂಜಯ ಅಪ್ಪಗಳವರ ಹಾಗೂ ಕರ್ನಾಟಕ ಗಾಂಧಿ ಲಿಂ. ಹರ್ಡೇಕರ್ ಮಂಜಪ್ಪನವರ ಸ್ಮರಣೋತ್ಸವವನ್ನು ಶ್ರೀ ಶಿವಯೋಗಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಚಿತ್ರದುರ್ಗದ ಜಾನಪದ ಕಲಾವಿದ ಗಂಜಿಗಟ್ಟೆ ಕೃಷ್ಣಮೂರ್ತಿ ಅವರಿಂದ ವಚನ ಸಂಗೀತ ಏರ್ಪಾಡಾಗಿದೆ.

ಬಸವ ಜಯಂತಿ ಪ್ರಯುಕ್ತ ಜನಜಾಗೃತಿಗಾಗಿ ಬಸವ ಪ್ರಭಾತ್ ಪೇರಿಯನ್ನು ಲಿಂ. ಕಣಕುಪ್ಪಿ ಕೊಟ್ರಬಸಪ್ಪ ಮತ್ತು ಲಿಂ. ಕಣಕುಪ್ಪಿ ಗುರುಪಾದಪ್ಪ ಅವರುಗಳ ನೇತೃತ್ವದಲ್ಲಿ 106 ವರ್ಷಗಳ ಹಿಂದೆ ಪ್ರಾರಂಭಿಸಲಾಗಿದ್ದು, ಅಂದಿನಿಂದ ಪ್ರತಿ ವರ್ಷವೂ ಬಸವ ಪ್ರಭಾತ್ ಪೇರಿ ನಡೆಸಲಾಗುತ್ತಿದೆ ಎಂದು ಲಿಂಗಾಯತ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

# ದೊಡ್ಡಪೇಟೆಯಲ್ಲಿ ಬಸವ ಜಯಂತಿ

ದಾವಣಗೆರೆ, ಏ.16- ಶ್ರೀ ಜಗಜ್ಯೋತಿ ಬಸವೇಶ್ವರರ 112ನೇ ವರ್ಷದ ಜಯಂತ್ಯೋತ್ಸವವು ಇದೇ ದಿನಾಂಕ 21ರಿಂದ ನಾಲ್ಕು ದಿನಗಳ ಕಾಲ ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಡೆಯಲಿದೆ.

ದಿನಾಂಕ 21ರ ಶುಕ್ರವಾರ ಪ್ರಾತಃಕಾಲ ವಚನಾಭಿಷೇಕ, ಗಣಾರಾಧನೆ, ದಿನಾಂಕ 22ರ ಶನಿವಾರ ರಾತ್ರಿ 7.30ಕ್ಕೆ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಭಜನಾ ಸಂಘದಿಂದ ಭಜನೆ ಜರುಗಲಿದೆ.

ದಿನಾಂಕ 23ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಮಹಿಳೆಯರಿಂದ ತೊಟ್ಟಿಲು ಪೂಜಾ ಕಾರ್ಯಕ್ರಮ, ಸಂಜೆ 6 ಕ್ಕೆ ಹೂವಿನ ಅಲಂಕಾರ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರರ ಬೆಳ್ಳಿ ಪುತ್ಥಳಿ ಭವ್ಯ ಮೆರವಣಿಗೆ ಏರ್ಪಾಡಾಗಿದೆ.

ದಿನಾಂಕ 24ರ ಸೋಮವಾರ ಮಧ್ಯಾಹ್ನ 12.30ಕ್ಕೆ ಸಾರ್ವಜನಿಕರಿಗೆ ಮಹಾದಾಸೋಹ ಆಯೋಜನೆಗೊಂಡಿದೆ. ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರೂ ಆಗಿರುವ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಮತ್ತು ಸಹೋದರರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ಸಿದ್ಧಗಂಗಾದಲ್ಲಿ ಎಂಎಸ್ಸೆಸ್ ಕ್ವಿಜ್



ದಾವಣಗೆರೆ, ಏ. 16 - ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಇಂದು ಆಯೋಜಿಸಿದ್ದ ಪ್ರತಿಷ್ಠಿತ ಎಂ. ಎಸ್. ಎಸ್. ಕ್ವಿಜ್ ಯಶಸ್ಸು ಕಂಡಿತು.

ಶಿಕ್ಷಣ ಶಿಲ್ಪಿ ಡಾ. ಎಂ. ಎಸ್. ಶಿವಣ್ಣನವರ ಗೌರವಾರ್ಥ ಕಳೆದ 9 ವರ್ಷಗಳಿಂದ ನಡೆಸುತ್ತಿರುವ ಈ ಲಿಖಿತ ಕ್ವಿಜ್‌ಗೆ 2300 ವಿದ್ಯಾರ್ಥಿಗಳು ಹಾಜರಾಗಿದ್ದರು. ಆಂಗ್ಲ ಮಾಧ್ಯಮ ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮದ ಮಕ್ಕಳ ಜೊತೆ ಕನ್ನಡ ಮಾಧ್ಯಮದ ಮಕ್ಕಳೂ ಭಾಗವಹಿಸಿದ್ದು ವಿಶೇಷವಾಗಿತ್ತು.

ಸಿದ್ಧಗಂಗಾ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸುಶ್ರಾವ್ಯ ಭಕ್ತಿಗೀತೆಗಳೊಂದಿಗೆ ಪ್ರಾರಂಭವಾದ ಕ್ವಿಜ್‌ಗೆ ಆಗಮಿಸಿದ್ದ ಮಕ್ಕಳನ್ನು ಮತ್ತು ಪಾಲಕರನ್ನು ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿ'ಸೌಜ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ನಿರ್ದೇಶಕರಾದ ಡಾ|| ಜಯಂತ್ ಎಂ. ಎಸ್. ಎಸ್ ಕ್ವಿಜ್‌ನ ನಿಯಮಗಳನ್ನು ಮಕ್ಕಳಿಗೆ ತಿಳಿಸಿದರು.

ಶಾಲೆಯ ಸಂಸ್ಥಾಪಕ ಎಂ. ಎಸ್. ಶಿವಣ್ಣನವರ ಗೌರವಾರ್ಥ ಎಂ. ಎಸ್. ಎಸ್ ಕ್ವಿಜ್ ಮತ್ತು ಎಂ. ಎಸ್. ಎಸ್ ಸ್ಕಾಲರ್‌ಶಿಪ್ ಹಾಗೂ ಎಂ. ಎಸ್. ಎಸ್ ಟ್ರೈನಿಂಗ್ ಸೆಂಟರ್‌ನಲ್ಲಿ ನೀಡುತ್ತಿರುವ ಸೂಪರ್ ಬ್ರೈನ್ ಟ್ರೈನಿಂಗ್ ಬಗ್ಗೆ ಮಾಹಿತಿ ನೀಡಿದ ಅವರು, ಎಂ. ಎಸ್. ಎಸ್ ಕ್ವಿಜ್‌ನಲ್ಲಿ ವಿಜೇತ ಮಕ್ಕಳಿಗೆ ಎರಡು ವರ್ಷದ ಉಚಿತ ಪಿಯು ವಿಜ್ಞಾನ ಶಿಕ್ಷಣ ಮತ್ತು ಸ್ಕಾಲರ್‌ಶಿಪ್ ಪಡೆಯಲು ಬೇಕಾದ ಅರ್ಹತೆಗಳನ್ನು ತಿಳಿಸಿದರು.

ಎಂ.ಎಸ್.ಎಸ್. ಟ್ರೋಫಿ ಹಿಡಿದ ಪಿಯುಸಿ ವಿದ್ಯಾರ್ಥಿನಿಯರು ಆಕರ್ಷಕ ಪಥ ಸಂಚಲನ ನಡೆಸಿದರು. ರಾಸಾಯನಿಕ ವಸ್ತುಗಳನ್ನು ಬಳಸಿ ಕೇಸರಿ, ಬಿಳಿ, ಹಸಿರು ಕಾರಂಜಿ ಚಿಮ್ಮಿಸಿದರು.

ಸಂಸ್ಥೆಯ ಅಧ್ಯಕ್ಷ ಡಿ. ಎಸ್. ಪ್ರಶಾಂತ್, ಮನುಶ್ರೀ ಮತ್ತು ಮನೋಹರ, ಹರ್ಷ ಅವರು ಕ್ವಿಜ್ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದರು. ಕಾರ್ಯದರ್ಶಿ ಹೇಮಂತ್ ಅವರು ಸ್ವಾಗತಿಸಿದರು.

# ಹರಪನಹಳ್ಳಿ : ಸದಾಶಿವ ಆಯೋಗದ ವರದಿ ಶಿಫಾರಸ್ಸು ಮಾಡದಂತೆ ಒತ್ತಾಯ



## ಮೀಸಲಾತಿ ಸಂರಕ್ಷಾ ಒಕ್ಕೂಟದ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

ಹರಪನಹಳ್ಳಿ.ಏ.16 ರಾಜ್ಯ ಸರ್ಕಾರ ನ್ಯಾ. ಸದಾಶಿವ ಆಯೋಗದ ವರದಿಯಂತೆ ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳ ಮೀಸಲಾತಿ) ಹಂಚಿಕೆ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಅಸಂವಿಧಾನಿಕ ಮತ್ತು ಅವೈಜ್ಞಾನಿಕ ಸದಾಶಿವ ಆಯೋಗದ ವರದಿಯನ್ನು ಶಿಫಾರಸ್ಸು ಮಾಡದಂತೆ ಒತ್ತಾಯಿಸಿ ತಾಲ್ಲೂಕು ಮೀಸಲಾತಿ ಸಂರಕ್ಷಾ ಒಕ್ಕೂಟದ ಸಮಿತಿಯ ಪದಾಧಿಕಾರಿಗಳು ಪ್ರತಿಭಟನೆ ಮಾಡಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ವೃತ್ತದಲ್ಲಿ ಮೀಸಲಾತಿಯಿಂದ ವಂಚಿತರಾಗಿರುವ ಭೋವಿ, ಲಂಬಾಣಿ, ಕೊರಚ, ಕೊರಮ, ಅಲೆಮಾರಿ ಸೇರಿದಂತೆ ಅನೇಕ ಸಮುದಾಯದ ಯುವಕರು, ಕೂಲಿ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ಅವೈಜ್ಞಾನಿಕ ಸದಾಶಿವ ಆಯೋಗದ ವರದಿಯ ವಿರುದ್ಧ ಹಾಗೂ ವರದಿಯನ್ನು ಶಿಫಾರಸ್ಸು ಮಾಡಲು ಹುನ್ನಾರ ನಡೆಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ಸಮುದಾಯಗಳನ್ನು ಬದಿಗೊತ್ತಿ, ಕೆಲ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದಿಂದ ಒಳ ಮೀಸಲಾತಿಯನ್ನು ವರ್ಗೀಕರಣ ಮಾಡಿರುವುದು ಖಂಡನೀಯ. ಇಂತಹ ವರದಿಯು ಅಸಂವಿಧಾನಿಕ ವರದಿ ಎಂದು ಗೊತ್ತಿದ್ದರೂ ಸಹ ಸಹೋದರರಂತೆ ಬಾಳುತ್ತಿರುವ ಸಮುದಾಯಗಳ ಮಧ್ಯೆ ಇಂತಹ ತಂತ್ರ ಮತ್ತು ಕುತಂತ್ರದಿಂದ ಒಳ ಮೀಸಲಾತಿಯನ್ನು ವಿಭಜಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ ಇದರಿಂದ ರಾಜ್ಯದ ಬಂಜಾರ, ಭೋವಿ, ಕೊರಚ, ಕೊರಮ, ಅಲೆಮಾರಿ, ಅರೆ ಮಾರಿ ಮತ್ತಿತರೆ ಸಣ್ಣ ಸಮುದಾಯಗಳು ಸರ್ಕಾರದ ಈ ನಿರ್ಧಾರವನ್ನು ಬಲವಾಗಿ ಖಂಡಿಸಿದರು.

ಈ ಸಂದರ್ಭದಲ್ಲಿ ಬಂಜಾರ ಸಮುದಾಯದ ಹಿರಿಯ ಮುಖಂಡ ಎಂ.ಪಿ.ನಾಯ್ಕ, ಕೊರಚ ಸಮುದಾಯದ ಮುಖಂಡ ಅಶೋಕ, ಭೋವಿ ಸಮುದಾಯದ ಮುಖಂಡ ಬೆಂಡಿಗೇರಿ ಗುರುಸಿದ್ದಪ್ಪ, ಕೊರಮ ಸಮುದಾಯದ ಮುಖಂಡ ರಾಮಮೂರ್ತಿ, ನಾಗರಾಜ್, ಇತರೆ ಸಮುದಾಯದ ಮುಖಂಡರುಗಳಾದ ಎಸ್.ಪಿ. ಲಿಂಬ್ಯಾನಾಯ್ಕ, ಅಜ್ಜಯ್ಯ, ಬಿ.ವೈ. ವೆಂಕಟೇಶ್, ಮಂಜ್ಯಾನಾಯ್ಕ, ಎಂ.ವಿ. ಕೃಷ್ಣಕಾಂತ್, ಗೋಪಿನಾಯ್ಕ, ನಾಗರಾಜ್ ನಾಯ್ಕ, ಹರೀಶ್ ನಾಯ್ಕ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಕಾಂಗ್ರೆಸ್ ಇದ್ದರೆ ಯಾರೂ ಉಪವಾಸ ಇರಲ್ಲ

## 45ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಪ್ರಚಾರ



ದಾವಣಗೆರೆ, ಏ.16- ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರೆ ಯಾರು ಸಹ ಉಪವಾಸ ಇರಲ್ಲ. ಪ್ರತಿಯೊಬ್ಬರಿಗೂ ಅನ್ನ, ಆಶ್ರಯವನ್ನು ಕಾಂಗ್ರೆಸ್ ಪಕ್ಷ ನೀಡುತ್ತಾ ಬಂದಿದೆ ಎಂದು ಶಾಮನೂರು ಶಿವಶಂಕರಪ್ಪ ಹೇಳಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಅವರು, 45ನೇ ವಾರ್ಡ್‌ನಲ್ಲಿ ಮನೆ-ಮನೆಗೆ ತೆರಳಿ ಇಂದು ಪ್ರಚಾರ ನಡೆಸಿದರು.

ಕರೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ 45ನೇ ವಾರ್ಡ್‌ನ ಕರೂರು, ಯರಗುಂಟೆ, ಅಶೋಕ ನಗರ, ಎಸ್.ಎಂ.ಕೃಷ್ಣ ನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಮತ ಯಾಚಿಸಿದರು. ಪ್ರಚಾರದಲ್ಲಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ಪ್ರತಿಯೊಬ್ಬರಿಗೂ 10ಕೆ.ಜಿ.ಅಕ್ಕಿ, ಪ್ರತಿ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ., 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಮತ್ತು ನಿರುದ್ಯೋಗಿ ಪದವೀಧರರಿಗೆ ಭತ್ಯೆಯನ್ನು ಸಹ ನೀಡಲಾಗುವುದು ಎಂದರು.

ಕಾಂಗ್ರೆಸ್ ಪಕ್ಷ ಎಲ್ಲಾ ವರ್ಗ, ಜಾತಿ-ಧರ್ಮದವರ ಪಕ್ಷವಾಗಿದ್ದು, ಪ್ರತಿ ಹಂತದಲ್ಲೂ ಸೌಲಭ್ಯ ಕಲ್ಪಿಸಲಾಗುತ್ತಿದ್ದು, ಮತದಾರರು ಇದನ್ನರಿತು ಮತ ನೀಡುವ ವೇಳೆ ಯೋಚಿಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಉದಯ್‌ಕುಮಾರ್, ವಾರ್ಡ್ ಅಧ್ಯಕ್ಷ ಬಾಲಕೃಷ್ಣ, ಹನುಮಂತಪ್ಪ ಕರೂರು, ಎಸ್. ಬಸಪ್ಪ, ಸೀಮೇಎಣ್ಣೆ ಮಲ್ಲೇಶಪ್ಪ, ವೆಂಕಣ್ಣ, ಆನಂದಪ್ಪ, ಎಂ.ಜಿ.ನಾಗೇಂದ್ರ, ನರೇಂದ್ರ, ಅಲೆಕ್ಸಾಂಡರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಬಿ.ವೀರಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಬೆಲ್ಲದ ಶಂಕರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ, ನಗರಸಭೆ ಮಾಜಿ ಅಧ್ಯಕ್ಷ ಎಂ. ಮಂಜುನಾಥ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಅನಿತಾಬಾಯಿ ಮಾಲತೇಶ್, ಬ್ಲಾಕ್ ಅಧ್ಯಕ್ಷರಾದ ಶುಭಮಂಗಳ, ಓಬಿಸಿ ರಾಜ್ಯ ಕಾರ್ಯದರ್ಶಿ ಜಮ್ನಳ್ಳಿ ನಾಗರಾಜ್, ಮುಖಂಡರುಗಳಾದ ಪೈಲ್ವಾನ್ ಭರಮಪ್ಪ, ಕರೂರು ನರೇಶ್, ರಿಯಾಜ್, ಮುಸ್ತಾಫ, ರಮೇಶ್, ಲೋಕೇಶ್, ಕ್ರಿಕೆಟ್ ಹಾಲಪ್ಪ, ಅಲ್ತಮಷ್, ಮಹೇಶ್, ಹರೀಶ್, ಸಿದ್ದು, ವೆಂಕಟೇಶ್, ಕರಿಬಸಪ್ಪ, ಮಧು, ಶಶಿ, ಬಸವರಾಜಪ್ಪ, ಮಜೀದ್, ಬಸಣ್ಣ, ದುರುಗೇಶ್, ಲೋಕಣ್ಣ, ಮಲ್ಲೇಶಪ್ಪ, ಹನುಮಂತಪ್ಪ, ಮುತ್ತು, ಇಟ್ಟಿಗುಡಿ ಆನಂದ್, ಸಾಗರ್ ಎಲ್. ಹೆಚ್., ಅಶೋಕ ನಗರದ ಬಸಣ್ಣ, ಅಶೋಕಣ್ಣ, ಶಾಂತಣ್ಣ, ಪೇಪರ್ ತಿಪ್ಪಣ್ಣ, ನಾಗೇಂದ್ರಪ್ಪ, ಶಿವಾನಂದ, ಫಕ್ಕೀರಣ್ಣ, ರಾಮಚಂದ್ರಪ್ಪ, ದೊಗ್ಗಳ್ಳಿ ಮಂಜಪ್ಪ, ಶರಣಪ್ಪ, ಅಂಜಿನಪ್ಪ, ಗೀತಾ ಚಂದ್ರಶೇಖರ್ ಮತ್ತು ಇತರರು ಭಾಗವಹಿಸಿದ್ದರು.

# ಉತ್ತರ, ದಕ್ಷಿಣಕ್ಕೆ ಬಿಜೆಪಿಯಿಂದ ಗೆಲ್ಲುವ ಕುದುರೆಗೆ ಟಿಕೆಟ್: ಬಾಡದ ಆನಂದರಾಜು



ದಾವಣಗೆರೆ, ಏ.16- ಬಿಜೆಪಿ ರಾಷ್ಟ್ರೀಯ ನಾಯಕರು ದಕ್ಷಿಣಕ್ಕೆ ಬಿ.ಜಿ ಅಜಯ್ ಕುಮಾರ್, ಉತ್ತರಕ್ಕೆ ನಾಗರಾಜ್ ಲೋಕಿಕೆರೆ ಅವರಿಗೆ ಟಿಕೆಟ್ ಘೋಷಿಸುವ ಮೂಲಕ ಬಿಜೆಪಿ ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸುವಂತಹ ಕೆಲಸ ಮಾಡಿದ್ದು, ನಿಜಕ್ಕೂ ಗೆಲ್ಲುವ ಕುದುರೆಗಳನ್ನು ಆಯ್ಕೆ ಮಾಡಿದೆ ಎಂದು ಶೋಷಿತ ವರ್ಗಗಳ ಮುಖಂಡ ಬಾಡದ ಆನಂದರಾಜು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಲವು ರಾಷ್ಟ್ರೀಯ ಪಕ್ಷಗಳಲ್ಲಿ ಟಿಕೆಟ್‌ಗಾಗಿ ದೆಹಲಿಯಲ್ಲಿ ನಾಯಕರ ಮನೆ ಬಾಗಿಲು ಕಾಯುವಂತಹ ಸಂಸ್ಕೃತಿ ಇಂದಿಗೂ ಇದೆ. ಆದರೆ ಬಿಜೆಪಿಯಲ್ಲಿ ಪ್ರಾಮಾಣಿಕವಾಗಿ ಪಕ್ಷದ ಕೆಲಸ ಮಾಡಿದವರು ನಾಯಕರ ಮನೆ ಬಾಗಿಲಿಗೆ ಹೋಗುವ ಅವಶ್ಯಕತೆ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ಸ್ಮಾರ್ಟ್ ಸಿಟಿಗೆ ಇಂಥ ಸ್ಮಾರ್ಟ್ ಯುವ ನಾಯಕರನ್ನು ಆಯ್ಕೆ ಮಾಡಿರುವುದು ಪಕ್ಷದ ಸಣ್ಣ ಕಾರ್ಯಕರ್ತರಿಗೂ ಹೊಸ ಹುಮ್ಮಸ್ಸು ನೀಡಿದೆ ಎಂದು ಉತ್ತರ ಅಭ್ಯರ್ಥಿ ಲೋಕಿಕೆರೆ ನಾಗರಾಜ್ ಅವರಿಗೆ ಶುಭ ಕೋರಿ ಮಾತನಾಡಿದರು.

ಸಂಸದ ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಅವರು ಯುವ ನಾಯಕರಿಗೆ ಟಿಕೆಟ್ ಕೊಡಿಸುವ ಮೂಲಕ ಕುಟುಂಬ ರಾಜಕಾರಣ ಬಿಜೆಪಿ ಪಕ್ಷದ ಸಂಸ್ಕೃತಿಯಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ವಯೋ ಸಹಜತೆಯಿಂದ ಚುನಾವಣೆ ರಾಜಕೀಯಕ್ಕೆ ಸ್ವಯಂ ನಿವೃತ್ತಿ ಘೋಷಿಸಿದ ಎಸ್.ಎ. ರವೀಂದ್ರನಾಥ್ ಮಾದರಿ ರಾಜಕಾರಣಿಯಾಗಿದ್ದಾರೆ ಎಂದು ಶ್ಲಾಘಿಸಿದ್ದಾರೆ.

ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ಮಂಜಾನಾಯ್ಕ್, ಶ್ಯಾಮನೂರು ಗಿರೀಶ್, ಮಹಿಳಾ ಮುಖಂಡರಾದ ಚೇತನಾ, ಸಲೀನಾ, ಭಾಗ್ಯ ಪಿಸಾಳೆ ಮತ್ತಿತರರು ಉಪಸ್ಥಿತರಿದ್ದರು.

# ಕಾಂಗ್ರೆಸ್ ದೇಶದ ಜನರ ನಂಬಿಕೆಯ ಪಕ್ಷ: ಎಸ್ಸೆಸ್ಸೆಂ

## ಎಸ್ಸೆಸ್ಸೆಂ ಪರ ಬಿ. ಲೋಕೇಶ್, ಆರ್.ಎಸ್. ಶೇಖರಪ್ಪ ನೇತೃತ್ವದಲ್ಲಿ 33, 34ನೇ ವಾರ್ಡ್‌ನಲ್ಲಿ ಪ್ರಚಾರ



ದಾವಣಗೆರೆ, ಏ.16- ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವದಿಂದಲೂ ಸಹ ಈ ದೇಶದ ಜನರ ನಂಬಿಕೆಯ ಪಕ್ಷವಾಗಿದೆ. ಬಡವರು, ದೀನ ದಲಿತರು, ಅಲ್ಪಸಂಖ್ಯಾತರು ಹಾಗೂ ಎಲ್ಲ ವರ್ಗದ ಜನರ ಕಷ್ಟ - ಸುಖಗಳನ್ನು ಅರಿತು ಅದರಂತೆ ನಡೆಯುವ ಪಕ್ಷವಾಗಿದೆ ಎಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹೇಳಿದರು.

ಅವರು, ಇಂದು ಅಪಾರ ಸಂಖ್ಯೆಯ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರ ಜೊತೆಗೂಡಿ 33 ಮತ್ತು 34ನೇ ವಾರ್ಡಿನಲ್ಲಿ ಭರ್ಜರಿ ರೋಡ್ ಶೋ ಮೂಲಕ ಮತದಾರರನ್ನು ಭೇಟಿ ಮಾಡಿ ಮತಯಾಚನೆ ಮಾಡಿ ಮತದಾರರನ್ನು ಉದ್ದೇಶಿಸಿ ಮಾತನಾಡಿದರು.

ದೇಶಕ್ಕಾಗಿ ಕಾಂಗ್ರೆಸ್ ಪಕ್ಷದ ಮಹಾನ್ ನಾಯಕರು ಹುತಾತ್ಮರಾಗಿದ್ದಾರೆ. ಕನ್ನಡ ನಾಡಿನ ಜನರ ಒಳಿತಿಗಾಗಿ ದುಡಿಯುವ, ನುಡಿದಂತೆ ನಡೆಯುವ, ಕೊಟ್ಟ ಭರವಸೆಗಳನ್ನು ಈಡೇರಿಸುವಂತಹ ಕಾಂಗ್ರೆಸ್ ಪಕ್ಷಕ್ಕೆ ಈ ಚುನಾವಣೆಯಲ್ಲಿ ಬಹುಮತ ಸಿಗುವುದು ಶತಸಿದ್ಧವಾಗಿದೆ. ಮತ ಪ್ರಭುಗಳು ಈಗಾಗಲೇ ತೀರ್ಮಾನ ಮಾಡಿಬಿಟ್ಟಿದ್ದಾರೆ ಎಂದು ಅವರು ತಿಳಿಸಿದರು.

40% ಕಮಿಷನ್ ಖ್ಯಾತಿಯ ಬಿಜೆಪಿಯ ನಿಜವಾದ ಬಣ್ಣ ಬಯಲಾಗಿದ್ದು, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅದಕ್ಕೆ ಭವಿಷ್ಯವಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆ ಪಕ್ಷವನ್ನು ಬಿಡುತ್ತಿರುವವರ ಸಂಖ್ಯೆಯನ್ನು ಗಮನಿಸಿದಾಗ ಮತ್ತೆ ಯಾವ ಕಾರಣಕ್ಕೂ ಬಿಜೆಪಿಗೆ ಅಧಿಕಾರ ಸಿಗುವುದಿಲ್ಲ ಎಂಬುದು ಗೊತ್ತಾಗುತ್ತದೆ.

ಅಲ್ಲದೇ, ರಾಜ್ಯದಲ್ಲೀಗ ಕಾಂಗ್ರೆಸ್ ಪಕ್ಷವನ್ನು ಸೇರುವವರು ಮತ್ತು ಬೆಂಬಲಿಸುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವ ಈ ಸಂದರ್ಭದಲ್ಲಿ, ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ಕಾಂಗ್ರೆಸ್ ಪಕ್ಷದ ಹಾಗೂ ದಾವಣಗೆರೆಯಲ್ಲಿ ನಾವುಗಳು ಮಾಡಿರುವ ಶಾಶ್ವತ ಅಭಿವೃದ್ಧಿ ಕೆಲಸಗಳನ್ನು ತಿಳಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಈ ಪ್ರಚಾರ ಕಾರ್ಯಕ್ರಮದಲ್ಲಿ ಬಿಜೆಪಿಯ ಮುಖಂಡರು ಹಾಗೂ ಮಾಜಿ ಉಪ ಮೇಯರ್ ಬಿ. ಲೋಕೇಶ್ ತಮ್ಮನ್ನು ಬೆಂಬಲಿಸಿ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ. ಅವರನ್ನು ನಾನು ಪಕ್ಷಕ್ಕೆ ಸ್ವಾಗತಿಸುತ್ತೇನೆ. ಶೀಘ್ರದಲ್ಲೇ ದೊಡ್ಡ ಸಮಾರಂಭ ಮಾಡಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ಎಸ್ಸೆಸ್ಸೆಂ ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಆರ್. ಎಸ್. ಶೇಖರಪ್ಪ, ನಗರಸಭೆ ಮಾಜಿ ಅಧ್ಯಕ್ಷ ಆರ್. ಎಚ್ . ನಾಗಭೂಷಣ್, ಮಹಾನಗರ ಪಾಲಿಕೆ ಮಾಜಿ ಉಪಮೇಯರ್ ಬಿ ಲೋಕೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್. ಬಿ. ಮಂಜಪ್ಪ, ಗುರುರಾಜ್, ಹುಲ್ಲುಮನೆ ಗಣೇಶ್, ಮಧುಸೂದನ್, ಶಿವಶಂಕರ್, ವೆಂಕಟೇಶ್ ನಾಯಕ್, ಪ್ರಶಾಂತ್ ಪಚ್ಚಿ, ಪಿ.ಕೆ. ಲಿಂಗೇಶ್, ಎಸ್ ಕೆ. ಜಬೀವುಲ್ಲಾ, ಹನುಮಂತ ಗೌಡ್ರು, ಜಯಣ್ಣ, ಲಕ್ಷ್ಮಣ, ಮಂಜುನಾಥ್ ಗೌಡ್ರು, ಪ್ರಸಾದ್, ಶಾಮು, ಪವಾಡಪ್ಪಳ ತಿಪ್ಪೇಸ್ವಾಮಿ, ನೀಲಕಂಠಪ್ಪ ಫೈನಾನ್ಸ್, ಕೆಂಚಮ್ಮ, ರಾಜೇಶ್ವರಿ, ದಾಕ್ಷಾಯಣಮ್ಮ, ಲಕ್ಷ್ಮಿದೇವಿ, ಮಂಗಳಮ್ಮ ಶಿವಯೋಗಿ, ಪ್ರಕಾಶ್ ಹಾಗೂ ಇತರರು ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

# ಹರಪನಹಳ್ಳಿ: ಡಾ. ಮಲ್ಕಪ್ಪ ಅಧಿಕಾರ್ ಕುಟುಂಬ ಬಿಜೆಪಿಗೆ ಗುಡ್‌ಬೈ



ಹರಪನಹಳ್ಳಿ, ಏ.16- ತಾಲ್ಲೂಕಿನ ಹಲುವಾಗಲು ಗ್ರಾಮದ, ಪಟ್ಟಣದ ಪ್ರಸಿದ್ಧ ವೈದ್ಯರಾದ ಮಲ್ಕಪ್ಪ ಅಧಿಕಾರ್ ಅವರ ಕುಟುಂಬ ಬಿಜೆಪಿ ಶಾಸಕ ಜಿ. ಕರುಣಾಕರ ರೆಡ್ಡಿ ಅವರ ಆಡಳಿತ ವೈಖರಿಗೆ ಬೇಸತ್ತು ಕುಟುಂಬ ಸಮೇತ ಬಿಜೆಪಿಯಿಂದ ಹೊರ ಬಂದಿದ್ದಾರೆ.

ಈ ಕುರಿತು ಪಟ್ಟಣದ ತಮ್ಮ ಗೊರವಿನ ತೋಟದ ತಮ್ಮ ಆಸ್ಪತ್ರೆಯಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಲುವಾಗಲು, ಗರ್ಭಗುಡಿ, ಕಡತಿ, ನಂದ್ಯಾಲ, ಇ. ಬೇವಿನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಿಗೆ ಅಭಿವೃದ್ಧಿ ಆಗದೇ ಇರುವ ವಿಚಾರಕ್ಕೆ ಸಂಬಂಧಿಸಿದಂತೆ ನಾವುಗಳು ಬಿಜೆಪಿಯಿಂದ ದೂರ ಉಳಿಯಲು ನಿರ್ಧರಿಸಿದ್ದೇವೆ ಎಂದರು.

ಶಾಸಕರು ಸ್ಥಳೀಯ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕಳೆದ ಐದು ವರ್ಷ ಅವರ ಏಕ ನಿರ್ಣಯದಿಂದ ಕಾರ್ಯಕರ್ತರನ್ನು ಕಡೆಗಣಿಸಿ ಅಭಿವೃದ್ಧಿಗೆ ಹಿನ್ನಡೆ ಮಾಡಿದ್ದಾರೆ. ಪಕ್ಕದ ತಾಲ್ಲೂಕಿನ ಬಿಜೆಪಿ ಶಾಸಕರು ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಆದರೆ ಶಾಸಕರಾಗಿ, ಮಂತ್ರಿಯಾಗಿ ಅನುಭವ ಇರುವವರೇ ಈ ರೀತಿ ಅಭಿವೃದ್ಧಿಗೆ ಹಿನ್ನಡೆ ಮಾಡಿದರೆ ಕ್ಷೇತ್ರ ಅಭಿವೃದ್ಧಿಯಾಗುವುದಾದರೂ ಹೇಗೆ ಎಂದರು.

ಈ ಹಿನ್ನೆಲೆಯಲ್ಲಿ ಮುಂದೆ ತಾಲ್ಲೂಕಿನ ಇಚ್ಛಾಶಕ್ತಿಗೆ ಒತ್ತು ನೀಡುವ ಶಾಸಕರು ಬೇಕಾಗಿದ್ದು, ಹಾಗಾಗಿ ನಾವು ನಮ್ಮ ಮುಂದಿನ ನಡೆ ಯಾವ ಪಕ್ಷಕ್ಕೆ ಸೇರಬೇಕೆಂಬುವುದನ್ನು ನಮ್ಮ ಕಾರ್ಯಕರ್ತರ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳತ್ತೇವೆಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕೊಟ್ರಮ್ಮ ಅಧಿಕಾರ್, ಡಾ. ರಘು ಅಧಿಕಾರ್, ರವಿ ಅಧಿಕಾರ್, ಡಾ. ಸೀಮಾ ಅಧಿಕಾರ್, ಡಾ.ಪ್ರಿಯಾಂಕ ಅಧಿಕಾರ್ ಸೇರಿದಂತೆ ಇತರರು ಇದ್ದರು.



## ಗೋವಿನಹಾಳ್‌ನಲ್ಲಿ ರಥೋತ್ಸವ

ಮಲೇಬೆನ್ನೂರು, ಏ. 16 - ಗೋವಿನಹಾಳ್ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಭಾನುವಾರ ಬೆಳಿಗ್ಗೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ಸಂಜೆ ಓಕಳಿ ನಂತರ ಭೂತನ ಸೇವೆ ನಡೆದವು.

# ಅಂಬಾಭವಾನಿ ಬ್ಯಾಂಕಿಗೆ ಲಾಭ

**1.45 ಕೋಟಿ ರೂ. ಷೇರು ಬಂಡವಾಳ, 1.15 ಕೋಟಿ ರೂ. ಕಾಯ್ದಿರಿಸಿದ ನಿಧಿಗಳು, 82 ಲಕ್ಷ ರೂ. ಇತರೆ ನಿಧಿಗಳಿದ್ದು, 20 ಕೋಟಿ ರೂ. ಠೇವಣಿ ಹೊಂದಿದೆ. ಸದಸ್ಯರ ವಿವಿಧ ಉದ್ದೇಶಗಳಿಗನುಗುಣ ವಾಗಿ 9.50 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. 10.12 ಕೋಟಿ ರೂ. ತೊಡಗಣಿಯಾಗಿದೆ. ಶೇ. 4.55 ಗ್ರಾಸ್ ಎನ್.ಪಿ.ಎ. ಆಗಿದ್ದು, ನೆಟ್ ಎನ್.ಪಿ.ಎ 0.08% ತಮ್ಮ ಬ್ಯಾಂಕಿನ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ.**

**- ಎ. ಕಿರಣ್ ಕುಮಾರ್, ಅಧ್ಯಕ್ಷರು**

**(1ನೇ ಪುಟದಿಂದ)** ಆಶೋತ್ತರಕ್ಕನುಗುಣವಾಗಿ ವ್ಯಾಪಾರ/ವ್ಯವಹಾರ ನಡೆಸಿಕೊಂಡು, ಈಗ ಸದೃಢರಾಗಿ ಸಮಾಜದಲ್ಲಿ ಗುರುತಿಸಿಕೊಂಡಿರುವವರ ಯಶಸ್ಸಿನ ಹಿಂದೆ ಶ್ರೀ ಅಂಭಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಇದೆ ಎಂದರೆ ಅತಿಶಯೋಕ್ತಿಯೇನಲ್ಲ ಎಂದು ಕಿರಣ್ ಕುಮಾರ್ ಅಭಿಪ್ರಾಯಪಟ್ಟರು.

**ಡಿಜಿಟಲೈಜೇಷನ್ :** ಸ್ಪರ್ಧಾತ್ಮಕ ಯುಗಕ್ಕನುಗುಣವಾಗಿ ಬ್ಯಾಂಕಿಂಗ್‌ನಲ್ಲಿ ಡಿಜಿಟಲೈಜೇಷನ್ ಅಳವಡಿಸಿದ್ದು, ಈ ಸ್ಪರ್ಧೆಯಲ್ಲಿ ನಮ್ಮ ಬ್ಯಾಂಕು ಗುರಿಯನ್ನು ತಲುಪಲು ಎಲ್ಲಾ ರೀತಿಯಿಂದಲೂ ಸಜ್ಜಾಗಿದೆ. ಅದರಂತೆ ಬ್ಯಾಂಕು ತನ್ನ ಗ್ರಾಹಕರಿಗೆ ಆರ್‌ಟಿಜಿಎಸ್, ನೆಫ್ಟ್ ಸೇರಿದಂತೆ ಅನೇಕ ಸೌಲಭ್ಯಗಳನ್ನು ಒದಗಿಸಿದೆ ಎಂದು ಅವರು ಹೇಳಿದರು.

**ಕೃತಜ್ಞತೆ :** ಸರ್ವತೋಮುಖ ಅಭಿವೃದ್ಧಿಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಈ ಬ್ಯಾಂಕ್ ಪ್ರಗತಿದಾಯಕವಾಗಿ ಮುನ್ನಡೆಯಲು ಬ್ಯಾಂಕಿನ ಸದಸ್ಯರು ಮತ್ತು ಠೇವಣಿದಾರರ ಪ್ರೋತ್ಸಾಹ ಹಾಗೂ ಸಹಕಾರ, ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾ ರರು ಹಾಗೂ ಸಾಲ ವಸೂಲಿಗಾರರ ಪರಿಶ್ರಮ, ಆಡಳಿತ ಮಂಡಳಿಯ ಇಚ್ಛಾಶಕ್ತಿ ಕಾರಣವಾಗಿದೆ ಎಂದು ತಿಳಿಸಿದ ಬ್ಯಾಂಕಿನ ಉಪಾಧ್ಯಕ್ಷ ಜಿ.ಎಂ. ಪರಶುರಾಮ ರಾವ್, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿ ಸುತ್ತಿರುವ ಎಲ್ಲರನ್ನೂ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ನಿರ್ದೇಶಕರುಗಳಾದ ಡಾ. ತಿಪ್ಪೇಸ್ವಾಮಿ ಏಕಬೋಟೆ, ಆರ್.ಜಿ. ಸತ್ಯನಾರಾಯಣ, ಎಸ್.ಬಾಬುರಾವ್ ಸಾಳಂಕಿ, ಶಿವಾಜಿರಾವ್, ಎಸ್. ಜಗನ್ನಾಥ್ ಗಂಜಿಗಟ್ಟಿ, ಪಿ.ಜಿ. ಪಾಂಡುರಂಗರಾವ್, ಎಂ.ಡಿ. ಗಿರಿಧರ್, ಆನಂದ ಡಿ. ಸಫಾರೆ, ಗೋಪಿನಾಥ್, ಬಾಬು, ಡಾ. ಎಸ್. ರಜನಿ, ಶ್ರೀಮತಿ ಜಿ.ಅನಿತಾಬಾಯಿ, ಶ್ರೀಮತಿ ಬಿ.ಎಂ. ಶ್ಯಾಮಲಾ, ವೃತ್ತಿಪರ ನಿರ್ದೇಶಕರುಗಳಾದ ವಕೀಲ ಎ.ಸಿ.ರಾಘವೇಂದ್ರ ಮೊಹರೆ, ಲೆಕ್ಕ ಪರಿಶೋಧಕ ರಾಜು ಮಹೇಂದ್ರಕರ್ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ನಾಗರಾಜ್ ಗೌಡನಕಟ್ಟಿ ಸ್ವಾಗತಿಸಿದರು. ಸಹಾಯಕ ವ್ಯವಸ್ಥಾಪಕ ಅನಿಲ್ ಟಿ. ಮಾಳದಕರ್ ವಂದಿಸಿದರು.

# ಮಾಯಕೊಂಡ ಮಾದರಿ ಕ್ಷೇತ್ರವನ್ನಾಗಿ ಮಾಡುವ ಮಹದಾಸೆ ನನ್ನದು : ಆನಂದಪ್ಪ

ದಾವಣಗೆರೆ, ಏ. 16- ರಾಜ್ಯದಲ್ಲೇ ಮಾಯಕೊಂಡವನ್ನು ಮಾದರಿ ವಿಧಾನಸಭಾ ಕ್ಷೇತ್ರವನ್ನಾಗಿ ಮಾಡುವ ಮಹದಾಸೆ ತಮ್ಮದಾಗಿದ್ದು, ಶಿಕ್ಷಣ, ಆರೋಗ್ಯ, ನೀರಾವರಿಗೆ ಆದ್ಯತೆ ನೀಡುವುದಾಗಿ ಜೆಡಿಎಸ್ ಅಭ್ಯರ್ಥಿ ಆನಂದಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕ್ಷೇತ್ರದ ಮಕ್ಕಳಿಗೆ ಶಿಕ್ಷಣ, ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವಂತೆ ಮಾಡುವ ಜೊತೆಗೆ ಸಮಗ್ರ ನೀರಾವರಿ ಕಲ್ಪಿಸುವ ಯೋಜನೆ ರೂಪಿಸಲಾಗುವುದು ಎಂದರು.

ಪ್ರತಿ ಹಳ್ಳಿಗೂ ಕೆರೆ ನಿರ್ಮಿಸುವ ಉದ್ದೇಶ ನನ್ನದಾಗಿದ್ದು, ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 10 ರಿಂದ 15 ಕೈಗಾರಿಕೋದ್ಯಮಗಳನ್ನು ಸ್ಥಾಪಿಸಿ, 25 ಸಾವಿರ ಯುವಜನರಿಗೆ ಉದ್ಯೋಗ ನೀಡುವ ಯೋಜನೆ ಕೂಡ ಇದೆ ಎಂದು ಹೇಳಿದರು.

ಎರಡು ಬಾರಿ ಬಿಜೆಪಿಯವರು ಟಿಕೆಟ್ ನೀಡುತ್ತೇವೆಂದು ನಂಬಿಸಿ ವಂಚಿಸಿದ್ದಾರೆ. ಈ ಬಾರಿ ಕಾಂಗ್ರೆಸ್‌ನವರೂ ಸಹ ಟಿಕೆಟ್ ನೀಡುವುದಾಗಿ ಹೇಳಿ ವಂಚನೆ ಮಾಡಿದ್ದಾರೆ. ಇದರಿಂದ ಬೇಸತ್ತು ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾಗಿದ್ದೇನೆ ಎಂದರು.

ಬಿಜೆಪಿ ಅಭ್ಯರ್ಥಿಯೇ ನನಗೆ ಪ್ರತಿಸ್ಪರ್ಧಿಯಾಗಿದ್ದು, ಈ ಬಾರಿ ಮತದಾರರ ಆಶೀರ್ವಾದದಿಂದ 25 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸುವ ವಿಶ್ವಾಸ ತಮ್ಮದಾಗಿದೆ. ತೇಜಸ್ವಿ ಪಟೇಲ್ ಅವರೂ ಸಹ ಜೆಡಿಎಸ್‌ಗೆ ಸೇರ್ಪಡೆಯಾಗಿರುವುದು ನನಗೆ ಆನೆ ಬಲ ಬಂದಂತಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಸ್. ಅಣ್ಣೋಜಿರಾವ್, ಕೆ.ಬಿ. ಶಿವಕುಮಾರ್, ಬಿ.ಎಸ್. ವೆಂಕಪ್ಪ, ಆನಗೋಡು ಉಮೇಶ್ ಗೌಡ್ರು, ಕಂದಗಲ್ಲು ರೇವಣಸಿದ್ದಪ್ಪ, ಲಿಂಗರಾಜ ನಾಯ್ಕ, ಮಂಜಣ್ಣ ಬಸವನಾಳು, ಗೊಲ್ಲರಹಳ್ಳಿ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಬಂಡಾಯ ಶಮನ ಸವಾಲು

**(1ನೇ ಪುಟದಿಂದ)** ಬೊಮ್ಮಾಯಿ, ಯಡಿಯೂರಪ್ಪ, ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಬಂಡಾಯ ಶಮನದ ಯತ್ನ ನಡೆಸಿದ್ದಾರೆ. ಆರ್.ಎಸ್.ಎಸ್.ನ ಕೆಲ ನಾಯಕರೂ ಸಹ ಭಿನ್ನಮತೀಯರ ಮನವೊಲಿಕೆಯಲ್ಲಿ ತೊಡಗಿದ್ದಾರೆ. ಎಲ್ಲಾ ಅತೃಪ್ತ ನಾಯಕರ ಜೊತೆ ವೈಯಕ್ತಿಕವಾಗಿ ಮಾತನಾಡುತ್ತಿದ್ದೇವೆ. ಅವರು ಪಕ್ಷ ಬಿಟ್ಟು ಹೋಗದಂತೆ ನೋಡಿಕೊಳ್ಳುತ್ತಿದ್ದೇವೆ. ಕೇಂದ್ರ ನಾಯಕರೂ ಸಹ ಕೆಲ ಅತೃಪ್ತ ಹಿರಿಯ ನಾಯಕರ ಸಂಪರ್ಕದಲ್ಲಿದ್ದಾರೆ ಎಂದು ಬೊಮ್ಮಾಯಿ ಹಾಗೂ ಯಡಿಯೂರಪ್ಪ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಹಾಲಿ ಇಬ್ಬರು ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಇದರಿಂದ ಆಗಿರುವ ಭಿನ್ನಮತ ನಿವಾರಿಸಲು ಪ್ರಧಾನ್ ಅವರು ಬೆಳಗಾವಿಗೆ ತೆರಳಿದ್ದಾರೆ.

## ಸಚಿವ ಸ್ಥಾನ ಪ್ರಸ್ತಾಪಿಸಲಾಗಿತ್ತು

**(1ನೇ ಪುಟದಿಂದ)** ಅಲ್ಲದೇ, ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು 30 ವರ್ಷಗಳಿಂದ ಪ್ರಾಮಾಣಿಕವಾಗಿ ಪಕ್ಷಕ್ಕಾಗಿ ದುಡಿದಿದ್ದೇನೆ. ನನ್ನ ಕೆಲಸದಿಂದಾಗಿ ಗ್ರಾಮೀಣ ಭಾಗದಲ್ಲಿ ಬಿಜೆಪಿ ಬೆಳೆದಿದೆ ಎಂದು ಹೇಳಿದರು.

**ಸವದಿಗೆ ತರಾಟೆ :** ಬಿಜೆಪಿ ತೊರೆದ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರನ್ನು ತರಾಟೆಗೆ ತೆಗೆದುಕೊಂಡ ಯಡಿಯೂರಪ್ಪ, 2018ರ ಚುನಾವಣೆಯಲ್ಲಿ ಸೋತಿದ್ದ ಸವದಿ ಅವರನ್ನು ಉಪ ಮುಖ್ಯಮಂತ್ರಿ ಮಾಡಿದ್ದೆವು ಎಂದು ತಿಳಿಸಿದರು. ರಾಜ್ಯದ ಉದ್ದಗಲಕ್ಕೂ ಸಂಚರಿಸಿ ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸಿ ಈ ಬಾರಿ 130 ರಿಂದ 140 ಸ್ಥಾನಗಳನ್ನು ಪಡೆದು ಸ್ವಂತ ಬಲದಿಂದ ಅಧಿಕಾರಕ್ಕೆ ಬರಲಿದ್ದೇವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

# ಮೋದಿ ಅದಾನಿಗೆ ಕೊಟ್ಟರೆ, ಕಾಂಗ್ರೆಸ್ ಬಡವರಿಗೆ ಕೊಡಲಿದೆ



ಕೋಲಾರ, ಏ. 16 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾವಿರಾರೂ ಕೋಟಿ ರೂ.ಗಳನ್ನು ಉದ್ಯಮಿ ಗೌತಮ್ ಅದಾನಿ ಅವರಿಗೆ ಕೊಡುತ್ತಿದ್ದಾರೆ. ಕಾಂಗ್ರೆಸ್ ಮಾತ್ರ ಬಡವರು ಹಾಗೂ ಮಹಿಳೆಯರಿಗೆ ಹಣ ಕೊಡಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಜೈ ಭಾರತ್ ಸಮಾವೇಶದಲ್ಲಿ ಅವರು ಮಾತನಾಡಿದರು. ಬಿಜೆಪಿಯವರು ಮುಕ್ತ ಮನಸ್ಸಿನಿಂದ ಅದಾನಿಗೆ ನೆರವು ನೀಡಿದರೆ, ನಾವು ಮುಕ್ತ ಮನಸ್ಸಿನಿಂದ ಬಡವರಿಗೆ, ಯುವಕರಿಗೆ ಹಾಗೂ ಮಹಿಳೆಯರಿಗೆ ನೆರವು ನೀಡುತ್ತೇವೆ. ಪ್ರಧಾನಿ ಮೋದಿ ಅವರ ಕೆಲಸ ಮಾಡಲಿ, ನಾವು ನಮ್ಮ ಕೆಲ ಮಾಡುತ್ತೇವೆ ಎಂದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ನೂತನ ಸರ್ಕಾರ ಮೊದಲ ಸಂಪುಟ ಸಭೆಯಲ್ಲೇ ಚುನಾವಣಾ ಭರವಸೆಗಳನ್ನು ಈಡೇರಿಸಲಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

200 ಯುನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಪ್ರತಿ ತಿಂಗಳಿಗೆ 2 ಸಾವಿರ ರೂ. ಹಣ, ಬಿಪಿಎಲ್ ಕುಟುಬಂದವರಿಗೆ ತಲಾ 10 ಕೆಜಿ ಅಕ್ಕಿ ಹಾಗೂ ಯುವ ಪದವೀಧರ ನಿರುದ್ಯೋಗಿಗಳಿಗೆ ತಿಂಗಳಿಗೆ 3,000 ರೂ. ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ರಾಜ್ಯದ ಬಸವರಾಜ ಬೊಮ್ಮಾಯಿ ಸರ್ಕಾರ 40 ಪರ್ಸೆಂಟ್ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂಬ ಆರೋಪವನ್ನೂ ರಾಹುಲ್ ಗಾಂಧಿ ಪ್ರಸ್ತಾಪಿಸಿದರು.

ಗುತ್ತಿಗೆದಾರರ ಒಕ್ಕೂಟ ಈ ಬಗ್ಗೆ ಪ್ರಧಾನ ಮಂತ್ರಿಗೆ ಪತ್ರ ಬರೆದಿದೆ. ಆದರೂ, ಪ್ರಧಾನಿ ಮೌನವಾಗಿದ್ದಾರೆ. ಇದು ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಒಪ್ಪಿಕೊಂಡಂತೆ ಎಂದು ರಾಹುಲ್ ಗಾಂಧಿ ಆರೋಪಿಸಿದರು.

# ಮತ್ತಷ್ಟು ಅಭಿವೃದ್ಧಿಗೆ ಎಸ್ಸೆಸ್, ಎಸ್ಸೆಸ್ಸೆಂ ಗೆಲುವು ಮುಖ್ಯ : ಡಾ. ಪ್ರಭಾ



ದಾವಣಗೆರೆ, ಏ.16- ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಪರ ಅವರ ಪತ್ನಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಮಹಾನಗರ ಪಾಲಿಕೆಯ ವಿರೋಧ ಪಕ್ಷದ ಮಾಜಿ ನಾಯಕ ಹಾಗೂ 38ನೇ ವಾರ್ಡ್ ಸದಸ್ಯ ಗಡಿಗುಡಾಳ್ ಮಂಜುನಾಥ್ ನೇತೃತ್ವದಲ್ಲಿ ಬಡಾವಣೆಯ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಡಾ. ಪ್ರಭಾ, ಕಳೆದ ಐದು ವರ್ಷಗಳಲ್ಲಿ ಆಗಿರುವ ಅಭಿವೃದ್ಧಿ ಕಡಿಮೆ. ಮಲ್ಲಿಕಾರ್ಜುನ್ ಶಾಸಕರಾಗಿದ್ದಾಗ, ಸಚಿವರಾಗಿ ದ್ದಾಗ ಸಾವಿರಾರು ಕೋಟಿ ರೂಪಾಯಿ ಅನುದಾನ ತಂದು ಅಭಿವೃದ್ಧಿ ಪರ್ವ ಮಾಡಿದರು. ಇಂದಿಗೂ ಮಲ್ಲಿಕಾರ್ಜುನ್ ಅವರು ಮಾಡಿರುವ ಕಾರ್ಯಗಳು ಜನರ ಬಾಯಿ ಮಾತಿನಲ್ಲಿ ಹಾಗೂ ಮನದಲ್ಲಿವೆ. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಪಿ.ಬಿ. ರಸ್ತೆ ಅಗಲೀಕರಣ, ಕುಂದುವಾಡ ಕೆರೆ, ಏಷ್ಯಾ ಖಂಡದ 2ನೇ ಅತಿ ದೊಡ್ಡದಾದ ಗಾಜಿನ ಮನೆ, ನೀರಾವರಿ, ಶಿಕ್ಷಣ, ಮೂಲಭೂತ ಸೌಕರ್ಯಕ್ಕೆ ಆದ್ಯತೆ, ಹದಿನಾರು ಸಾವಿರಕ್ಕೂ ಹೆಚ್ಚು ಜನರಿಗೆ ಆಶ್ರಯ ಮನೆ ಕೊಟ್ಟ ಖ್ಯಾತಿ ಮಲ್ಲಿಕಾರ್ಜುನ್ ಅವರಿಗಿದೆ ಎಂದು ಹೇಳಿದರು.

ದಾವಣಗೆರೆ ಮತ್ತಷ್ಟು ಅಭಿವೃದ್ಧಿ ಆಗಬೇಕಾದರೆ ದೂರದೃಷ್ಟಿ ಹೊಂದಿರುವ, ಪ್ರಾಮಾಣಿಕ ಆಡಳಿತ ಬೇಕು. ಇದಕ್ಕಾಗಿ ಮಲ್ಲಿಕಾರ್ಜುನ್ ಅವರಿಗೆ ಮತ ಚಲಾಯಿಸಿ, ಗೆಲ್ಲಿಸಿ. ಅಭಿವೃದ್ಧಿ ಕಾರ್ಯಗಳಿಗೆ ಮತ್ತೆ ಚಾಲನೆ ಸಿಗುವ ಜೊತೆಗೆ ವೇಗವಾಗಿ ಪೂರ್ಣಗೊಳ್ಳುತ್ತವೆ. ನೀವು ಆಶೀರ್ವದಿಸಿದರೆ ಅಭಿವೃದ್ಧಿ ಪರ್ವ ಮತ್ತೆ ಆರಂಭವಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

# ನಗರದಲ್ಲಿ ಇಂದಿನಿಂದ ಕ್ಯಾಂಪ್ ಸನ್‌ಶೈನ್ ಬೇಸಿಗೆ ಶಿಬಿರ

3 ರಿಂದ 14 ವರ್ಷದೊಳಗಿನ ಮಕ್ಕಳಿಗಾಗಿ ಚಿರಂತನ ವಿಶೇಷವಾದ ಸಮ್ಮರ್ ಕ್ಯಾಂಪನ್ನು ಇಂದಿನಿಂದ ಬರುವ ಮೇ 3 ರವರೆಗೆ ಆಯೋಜಿಸಿದೆ. ಎರಡು ವಾರಗಳಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನಗೊಳಿಸುವ ವಿವಿಧ ಚಟುವಟಿಕೆಗಳ ಭಂಡಾರವೇ ಇಲ್ಲಿದೆ.

ಬ್ರೈನ್ ಜಿಮ್, ಭಯವಿಲ್ಲದೆ ವೇದಿಕೆಯ ಮೇಲೆ ಮಾತನಾಡುವ ಕಲೆ, ಉತ್ತಮ ಕೈಬರಹ ಅಭ್ಯಾಸ, ನೃತ್ಯ, ಆಕರ್ಷಕ ಆರ್ಟ್ ಅಂಡ್ ಕ್ರಾಫ್ಟ್ ಹಾಗೂ ಮುಖ್ಯವಾಗಿ ಭಾರತೀಯ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಹತ್ತು ಹಲವಾರು ಚಟುವಟಿಕೆಗಳಲ್ಲಿ ಮಕ್ಕಳು ಭಾಗಿಯಾಗಲಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 95356 56163.

# ನಗರದಲ್ಲಿ ಇಂದಿನಿಂದ ಚೆಸ್ ತರಬೇತಿ ಶಿಬಿರ

ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಮಕ್ಕಳಿಗೆ ಬೇಸಿಗೆ ಚೆಸ್ ತರಬೇತಿ ಶಿಬಿರವು ಇಂದಿನಿಂದ 15 ದಿನಗಳ ಕಾಲ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ತಿಳಿಸಿದ್ದಾರೆ. ವಿವರಕ್ಕೆ ಸಂಘದ ಕಾರ್ಯದರ್ಶಿ ಮಂಜುಳಾ (72593 10197) ಅವರನ್ನು ಸಂಪರ್ಕಿಸಬಹುದು.

# ನಗರದಲ್ಲಿ ನಾಳೆ ಬಾಪೂಜಿ ಹೈ-ಟೆಕ್ ಕಾಲೇಜಿನಲ್ಲಿ ವಿಚಾರ ಸಂಕಿರಣ

ದಾವಣಗೆರೆ, ಏ.16- ವಾಣಿಜ್ಯ ವಿಭಾಗ, ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಆಶ್ರ ಯದಲ್ಲಿ ಎರಡನೇ ಪ್ರಜ್ಞಾ, ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ನಾಡಿದ್ದು ದಿನಾಂಕ 18 ರಂದು 'ಎಮರ್ಜಿಂಗ್ ಟ್ರೆಂಡ್ಸ್ ಇನ್ ಬ್ಯುಸಿನೆಸ್, ಟೆಕ್ನಾಲಜಿ ಅಂಡ್ ಎಜುಕೇಶನ್' ಎಂಬ ಶೀರ್ಷಿಕೆಯಲ್ಲಿ ನಡೆಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಲೇಖನಗಳನ್ನು ಮಂಡಿಸಲು ವಿವರಗಳಿಗಾಗಿ ಪ್ರೊ. ಎಂ.ಎಸ್. ನಾಗರಾಜ್ (9964261851) ಅವರನ್ನು ಸಂಪರ್ಕಿಸುವುದು ಎಂದು ನಿರ್ದೇಶಕ ಸ್ವಾಮಿ ತ್ರಿಭುವಾನಂದ ಹೆಚ್.ವಿ. ತಿಳಿಸಿದ್ದಾರೆ.


## ಬೇಕಾಗಿದ್ದಾರೆ

ಆಪೆ ಆಟೋ Diesel, LPG, CNG ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು

**ಸೇಲ್ಸ್ ಎಕ್ಸಿಕ್ಯೂಟಿವ್ಸ್-6** (ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)

ವಿದ್ಯಾರ್ಹತೆ: SSLC to Degree. ಆಕರ್ಷಕ ಸಂಬಳ + Incentive+TA, DA.

**ವರ್ಕ್‌ಶಾಪ್ ಸೂಪರ್‌ವೈಸರ್-2**

PIAGGIO apé ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ: PIAGGIO apé

**ಗಣೇಶ ಮೋಟಾರ್** ಶೃತಿ ಮೋಟಾರ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ-6. Mob: 84949 43963



## RS ENTERPRISES

Near New DC Office Karur Industrial Area Davangere.

Job Requirement for Accountant 2 experienced in Accounts and GST Filing, Tally. Male of Female

Job Requirement for Tellicalling and Kannada Typing Minimum 2 years Experience only for female.

**Interview on 18th Monday 11.30 am**
**Send Resume or whatsapp &**
**Contact No. : 78999 27530**


## IN THE COURT OF THE HON'BLE 1st Addl., CIVIL JUDGE AND JMFC AT, DAVANGERE

Ex. No. 154/2020

**DECREE HOLDER :** Sri.M.N.Maheshwarappa S/o Mallajara Ningappa, Aged about 69 years, Agriculturist, R/o Devarahalli-Village-Post, Channagiri-Taluk, Davangere-District.

***V/S***

**JUDEGEMENT DEBTOR :** Smt. Kanthamma W/o Late: Dasara Hanumanthappa, Aged about 63 years, R/o Thuruchagatta-Village, Belavanuru-Post, Davangere-Taluk and District.

### PROCLAMATION OF SALE NOTICE

Notice is hereby given that, under order XXI Rule 64 of the Code of Civil Procedure, 1908, an order has been passed by the Court for the sale of the attached property mentioned in the below schedule, in satisfaction of the claim of the decree-holder in the petition mentioned in the margin amounting with cost and interest up to date of sale of the sum of Rs.81,883/- with future interest.

The Sale will be by public action and will be put up for sale as specified in the below schedule property. The sale will be of the property of the judgment-debtor above named as mentioned in the schedule below; and the liabilities and claims attaching to the said property, so far as they have been ascertained, are those specified in the schedule against the said property.

A spot sale shall be conducted on 23/05/2023 and court sale will conduct or 12/06/2023 as per court order at the sale the public generally are invited to bid either personally or by duly authorized agent. No bid by or behalf of the judgment -debtors above mentioned, however, will be accepted nor will any sale to them be valid without the express permission of the court previously given. The detailed terms and conditions are notified on the Notice Board of the Court and they should be strictly followed.

### SCHEDULE OF THE PROPERTY

A land bearing it's Sy. No.137/7, measuring 15 Guntas stated in the name judgment debtor, situated at Thuruchagatta-Village, Davangere-Kasaba-Hobali, Davangere-Taluk and District is bounded by :

**East:** Remaining land of Sy.No.137/7, **West:** Land of Gurupadappa, **South:** Land of Maheswarappa, **North:** Land of Mahadevappa.

**Advocate for the Decree-Holder**
**E.Fayaz, Davangere**

**Additional Civil Judge and J.M.F.C**
**Davanagere**

# ಹರಪನಹಳ್ಳಿಯಲ್ಲಿ ಎಂ.ಪಿ. ಲತಾ ಬಂಡಾಯ



**(1ನೇ ಪುಟದಿಂದ)** ಸಹೋದರ ಎಂ.ಪಿ.ರವೀಂದ್ರ ಅವರ ಹೆಸರು ಉಳಿಸುವ ಸಲುವಾಗಿ ನಾನು ಕಾಂಗ್ರೆಸ್ ಪಕ್ಷದಲ್ಲಿ ಶ್ರಮ ವಹಿಸಿ ಕೆಲಸ ಮಾಡಿದ್ದೇವೆಯೇ ಹೊರತು ಸ್ವಾರ್ಥಕ್ಕಾಗಿ ರಾಜಕೀಯಕ್ಕೆ ಬಂದಿಲ್ಲ ಎಂದರು.

ಪಕ್ಷಕ್ಕಾಗಿ ನಾನು ಐದು ವರ್ಷ ನಿಷ್ಠೆಯಿಂದ ದುಡಿದೆ, ಆದರೆ ಕಾಂಗ್ರೆಸ್ ಪಕ್ಷ ಬೇರೆಯವರಿಗೆ ಜವಾಬ್ದಾರಿ ವಹಿಸಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಸಂಬಂಧ ಇಂದಿಗೆ ಕಳೆದು ಹೋಗಿದೆ. ಇಲ್ಲಿಯವರೆಗೂ ಕಾರ್ಯಕರ್ತರು ನಮ್ಮ ಮಾತು ಕೇಳಿದ್ದರು. ಇದೀಗ ಕಾರ್ಯಕರ್ತರ ಅಭಿಪ್ರಾಯದಂತೆ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದರು. ಕಾಂಗ್ರೆಸ್ ಮುಖಂಡ ಎಚ್.ಎಂ.ಮಲ್ಲಿಕಾರ್ಜುನ್ ಮಾತನಾಡಿ, ಎಂ.ಪಿ.ಲತಾ ಅವರು ಕಳೆದ ಐದು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಿರುವುದು ಹೈಕಮಾಂಡ್‌ಗೆ ಗೊತ್ತಿದ್ದರೂ ಎಂ.ಪಿ.ಲತಾಗೆ ಟಿಕೆಟ್ ತಪ್ಪಿಸಿದ್ದಾರೆ. ಹಾಗಾಗಿ ಕಾರ್ಯ ಕರ್ತರ ಅಭಿಪ್ರಾಯದಂತೆ ಮಂಗಳವಾರ ಅಥವಾ ಬುಧವಾರ ಸರಿಯಾದ ಸಮಯ, ಗಳಿಗೆ ನೋಡಿ ನಾಮಪತ್ರವನ್ನು ಸಲ್ಲಿಸುತ್ತಾರೆ ಎಂದು ಹೇಳಿದರು.

ಮುಖಂಡ, ಎಂ.ಪಿ.ಲತಾ ರವರ ಪತಿ ಎಚ್.ಎಂ. ಮಲ್ಲಿಕಾರ್ಜುನ ಅವರು ಒಂದು ಹಂತದಲ್ಲಿ ಮಾತನಾಡುತ್ತಾ ಕಣ್ಣೀರು ಹಾಕಿದರು. ಆಗ ಕಾರ್ಯಕರ್ತರು ಅಳಬೇಡಿ ನಾವಿದ್ದೇವೆ ಎಂದರು.

ತಾ.ಪಂ ಮಾಜಿ ಅಧ್ಯಕ್ಷ ರಾದ ಹಳ್ಳಿಕೇರಿ ಎಚ್. ರಾಜಪ್ಪ, ಹಿರೇಮೇಗಳಗೇರೆ ಎಲ್.ಹನುಮಂತಪ್ಪ. ಮಾಜಿ ಉಪಾಧ್ಯಕ್ಷ ದೊಡ್ಡಜ್ಜರ ಹನುಮಂತಪ್ಪ, ಮುಖಂಡ ಬಿ.ಕೆ.ಪ್ರಕಾಶ್, ಪುರಸಭಾ ಸದಸ್ಯರುಗಳಾದ ಎಂ.ವಿ.ಅಂಜಿನಪ್ಪ, ಗೊಂಗಡಿ ನಾಗರಾಜ್, ಟಿ. ವೆಂಕಟೇಶ್, ಉದ್ದಾರ ಗಣೇಶ್, ಅಬ್ದುಲ್ ರಹಿಮಾನ್, ತಾ.ಪಂ ಮಾಜಿ ಸದಸ್ಯರುಗಳಾದ ಹುಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಣ್ಣ, ಕೆ.ಚಂದ್ರೇಗೌಡ, ರೈತ ಸಂಘದ ಎಚ್.ಎಂ.ಮಹೇಶ್ವರಸ್ವಾಮಿ, ತೆಲಿಗಿ ಜಿಬಿಟಿ ಮಹೇಶ್, ಟಿ.ಉಮಾಕಾಂತ್, ಬಾಣದ ಅಂಜಿನಪ್ಪ, ಗಣೇಶ್, ಪುಷ್ಪಾ ದಿವಾಕರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ, ಭಾಗ್ಯಮ್ಮ ರತ್ನಮ್ಮ, ವಿಜಯಲಕ್ಷ್ಮಿ, ಎಚ್.ಟಿ.ವನಜಾಕ್ಷಮ್ಮ ನಂದಿಬೇವೂರು ಗ್ರಾ.ಪಂ ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ತಾ.ಪಂ. ಮಾಜಿ ಸದಸ್ಯ ನೀಲಪ್ಪ ಸೇರಿದಂತೆ ಇತರರು ಹಾಜರಿದ್ದರು.

# ಕಮಾಂಡೆಂಟ್ ನಗರದ ಮೃದುಲ

**(1ನೇ ಪುಟದಿಂದ)** ಪರೇಡ್ ಕಮಾಂಡರ್ ಆಗಿ ಆಹ್ವಾನ ನೀಡುವಾಗ 'ಪರೇಡ್ ಕಮಾಂಡರ್ ಮೃದುಲ ದಾವಣಗೆರೆ, ಕರ್ನಾಟಕ್ ಕೆ ನಿವಾಸಿ ಹೈ' ಎಂದು ಉಲ್ಲೇಖಿಸಲಾಯಿತು.

ವೈದ್ಯಕೀಯ ವಲಯದಲ್ಲಿ ಸೇವೆ ಸಲ್ಲಿಸಲು ಅವಕಾಶಗಳಿವೆ. ಆದರೆ, ಸೈನಿಕರಿಗೆ ಅತ್ಯುತ್ತಮ ಚಿಕಿತ್ಸೆ ಒದಗಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಇದರ ಜೊತೆಗೆ, ಅಸಿಸ್ಟೆಂಟ್ ಕಮಾಂಡೆಂಟ್ ಹುದ್ದೆಯಲ್ಲಿ ಆಡಳಿತ ಹಂತದಲ್ಲಿಯೂ ಸಾಕಷ್ಟು ಜನರಿಗೆ ನೆರವಾಗಬಹುದು. ಈ ಎಲ್ಲ ಅವಕಾಶ ಬಿ.ಎಸ್.ಎಫ್. ಮೂಲಕ ದೊರೆತಿರುವುದು ಹೆಮ್ಮೆ ಎನಿಸಿದೆ ಎಂದು ಮೃದುಲ ಹೇಳಿದ್ದಾರೆ.

ಬಿ.ಎಸ್.ಎಫ್.ನಲ್ಲಿ ಅಧಿಕಾರಿಯ ಹುದ್ದೆಯಲ್ಲಿದ್ದರೂ, ಯುದ್ಧದ ತರಬೇತಿ ನೀಡಲಾಗುತ್ತದೆ. ಅಧಿಕಾರಿಗಳಾ ಗಿದ್ದವರೂ ಸಂಘರ್ಷದ ಸಮಯವನ್ನು ಎದುರಿಸಬೇಕಾಗುವ ಕಾರಣ, ಇಂತಹ ತರಬೇತಿ ಬೇಕಾಗುತ್ತದೆ ಎಂದು ಮೃದುಲ ಹೇಳಿದ್ದಾರೆ.

ವೈದ್ಯಕೀಯ ಅಧ್ಯಯನ ಮುಗಿಸಿದ್ದರೂ, ಸೈನ್ಯ ಇಲ್ಲವೇ ಪೊಲೀಸ್ ಸೇರಬೇಕೆಂಬ ಬಯಕೆ ಇತ್ತು. ಆ ಗುರಿ ತಲುಪಿದ್ದಕ್ಕೆ ಸಾರ್ಥಕತೆಯ ಭಾವ ಬಂದಿದೆ. ವೈದ್ಯಕೀಯ ಹಿನ್ನೆಲೆಯಿಂದ ಅಸಿಸ್ಟೆಂಟ್ ಕಮಾಂಡೆಂಟ್ ಆಗುವವರ ಸಂಖ್ಯೆ ಕಡಿಮೆ. ಇದು ಸೈನ್ಯದಲ್ಲಿ ತನ್ನ ಸೇವೆಯ ಅವಕಾಶ ಇನ್ನಷ್ಟು ಹೆಚ್ಚಿಸಿದೆ ಎಂದವರು ಉತ್ಸಾಹದಿಂದ ತಿಳಿಸಿದ್ದಾರೆ.

ವೈದ್ಯರಾಗಿದ್ದುಕೊಂಡು ಗಡಿ ಭದ್ರತಾ ಪಡೆಯ ಹುದ್ದೆಯಲ್ಲಿರುವವರ ಸಂಖ್ಯೆ ಕಡಿಮೆ ಇದೆ. ಅದರಲ್ಲೂ ಮಹಿಳಾ ಅಧಿಕಾರಿಗಳ ಸಂಖ್ಯೆ ಇನ್ನೂ ಕಡಿಮೆ. ಇಂತಹ ಹುದ್ದೆಗೆ ಮಗಳು ಆಯ್ಕೆಯಾಗಿರುವುದು ಹೆಮ್ಮೆ ತಂದಿದೆ ಎಂದು ತಾಯಿ ವಿಜಯಶ್ರೀ ಹೇಳಿದ್ದಾರೆ.

ಗಡಿ ಭದ್ರತಾ ಪಡೆ ಸೇರಿದಂತೆ ಭದ್ರತಾ ಪಡೆಗಳಲ್ಲಿ ಅಧಿಕಾರಿಗಳ ಹಂತದಲ್ಲಿ ಸೇವೆ ಸಲ್ಲಿಸಲು ಸಾಕಷ್ಟು ಅವಕಾಶಗಳಿವೆ. ಆದರೆ, ದಾವಣಗೆರೆ ಯಂತಹ ನಗರಗಳಲ್ಲಿ ಈ ಅವಕಾಶಗಳ ಮಾಹಿತಿ ಕಡಿಮೆ ಇದೆ. ನನಗೂ ಸಹ ಬೆಂಗಳೂರಿಗೆ ಬಂದ ನಂತರವೇ ಈ ಹುದ್ದೆಗಳ ಮಾಹಿತಿ ತಿಳಿಯಿತು. ಜಿಲ್ಲೆ ಹಾಗೂ ತಾಲ್ಲೂಕು ಹಂತಗಳಲ್ಲಿನ ಕಾಲೇಜುಗಳಲ್ಲಿ ಈ ಹುದ್ದೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

# 18 ರಂದು ಕಾರ್ಯಕರ್ತರ ಸಭೆ ಬಳಿಕ ನಾಮಪತ್ರ ಸಲ್ಲಿಕೆ : ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ.ಶಾಂತನಗೌಡ



**ಹೊನ್ನಾಳಿ**

ಹೊನ್ನಾಳಿ, ಏ.16- ವಿಧಾನಸಭೆ ಚುನಾವಣೆಗೆ ಹೊನ್ನಾಳಿ ಮತ ಕ್ಷೇತ್ರದಿಂದ ಕಾಂಗ್ರೆಸ್ ಹೈಕಮಾಂಡ್ ತನ್ನನ್ನು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯನ್ನಾಗಿ ಟಿಕೆಟ್ ನೀಡಿದ್ದು, ಈ ಹಿನ್ನೆಲೆಯಲ್ಲಿ ಇದೇ ದಿನಾಂಕ 18ರ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಬಳಿಕ ಚುನಾವಣಾಧಿಕಾರಿಗಳಿಗೆ ತಮ್ಮ ನಾಮಪತ್ರ ಸಲ್ಲಿಸಲಾಗುವುದು ಎಂದು ಮಾಜಿ ಶಾಸಕ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ.ಶಾಂತನಗೌಡ ಹೇಳಿದರು.

ಅವರು ಭಾನುವಾರ ಕಾಂಗ್ರೆಸ್ ಪಕ್ಷದ ತಾಲ್ಲೂಕು ಅಧ್ಯಕ್ಷ ಎಚ್.ಬಿ.ಶಿವಯೋಗಿ ಅವರ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಇದೇ ದಿನಾಂಕ 18 ರಂದು 11 ಗಂಟೆಗೆ ಗೊಲ್ಲರಹಳ್ಳಿಯ ತಮ್ಮ ಶಂಕರ ರೈಸ್‌ಮಿಲ್‌ನಿಂದ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಪಾದಯಾತ್ರೆ ಮೂಲಕ ಹೊರಟು ಹೊನ್ನಾಳಿಯ ಹಳೇ ಸಂತೆ ಮೈದಾನ (ಅಗಳ ಮೈದಾನ)ಕ್ಕೆ ಆಗಮಿಸಿ, ಅಲ್ಲಿ 12 ಗಂಟೆಗೆ ಆಯೋಜಿಸಲಾಗಿರುವ ಮುಖಂಡರು, ಕಾರ್ಯಕರ್ತರು, ಪಕ್ಷದ ಅಭಿಮಾನಿಗಳ ಸಭೆಯಲ್ಲಿ ಭಾಗವಹಿಸಲಾಗುವುದು. ನಂತರ ನಾಮಪತ್ರ ಸಲ್ಲಿಸಲಾಗುವುದು ಎಂದು ಅವರು ವಿವರಿಸಿದರು.

**ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ :** ಒಂದು ರಾಷ್ಟ್ರೀಯ ಪಕ್ಷ ಎಂದ ಮೇಲೆ ಚುನಾವಣಾ ಸಂದರ್ಭದಲ್ಲಿ ಹಲವಾರು ಜನ ಟಿಕೆಟ್ ಆಕಾಂಕ್ಷಿಗಳಿರುವುದು ಸಹಜ. ಆದರೆ, ಹೈಕಮಾಂಡ್ ಅಂತಿಮವಾಗಿ ಯಾರಿಗೆ ಟಿಕೆಟ್ ನೀಡುತ್ತದೆಯೋ ಅವರ ಗೆಲುವಿಗಾಗಿ ಎಲ್ಲರೂ ಕೈಜೋಡಿಸಲಿದ್ದಾರೆ. ಪಕ್ಷದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ, ಗೊಂದಲಗಳಿಲ್ಲ ಎಂದು ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಹೊನ್ನಾಳಿ ಬ್ಲಾಕ್‌ನ ಅಧ್ಯಕ್ಷ ಎಚ್.ಬಿ. ಶಿವಯೋಗಿ, ಸಾಸ್ವೆಹಳ್ಳಿ ಬ್ಲಾಕ್ ಅಧ್ಯಕ್ಷ ಆರ್.ನಾಗಪ್ಪ, ಮಾಜಿ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ, ಕೆ.ಪಿ.ಸಿ.ಸಿ. ಸದಸ್ಯ ಡಾ. ಈಶ್ವರ ನಾಯ್ಕ, ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ, ಜಿ.ಪಂ. ಮಾಜಿ ಸದಸ್ಯ ಎಂ. ರಮೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಬಣ್ಣಜ್ಜಿ, ಸ್ವರೂಪ್, ಎಲ್.ಕೆ.ಚಂದ್ರಪ್ಪ, ಮಾರುತಿ ರಾವ್ ಸೇರಿದಂತೆ ಅನೇಕರು ಇದ್ದರು.

# ಸಿಬಿಐನಿಂದ ಕೇಜ್ರಿವಾಲ್ ವಿಚಾರಣೆ

**(1ನೇ ಪುಟದಿಂದ)** ಕೇಜ್ರಿವಾಲ್, 56 ಪ್ರಶ್ನೆಗಳನ್ನು ಕೇಳಲಾಯಿತು. ಎಲ್ಲವಕ್ಕೂ ಉತ್ತರಿಸಿದ್ದೇನೆ. ನಾನು ಮುಚ್ಚಿಡುವಂಥದ್ದು ಏನೂ ಇಲ್ಲ ಎಂದರು. ಅಬಕಾರಿ ನೀತಿಯಲ್ಲಿ ಯಾವುದೇ ಹಗರಣ ನಡೆದಿಲ್ಲ. ರಾಜಕೀಯ ಪ್ರೇರಿತವಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

ಅಬಕಾರಿ ನೀತಿ ರೂಪಿಸುವಿಕೆ, ಕಾಣೆ ಯಾಗಿರುವ ಕಡತ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರಶ್ನಿಸ ಲಾಗಿದೆ ಎಂದು ಸಿ.ಬಿ.ಐ. ಅಧಿಕಾರಿಗಳು ಹೇಳಿದ್ದಾರೆ. 2021-22 ರ ಅಬ ಕಾರಿ ನೀತಿ ಹಗರಣದಲ್ಲಿ ಸಿಲುಕಿರುವ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಈಗಾಗಲೇ ಬಂಧಿಸಲಾಗಿದೆ.

ಇದಕ್ಕೂ ಮುಂಚೆ ಕೇಜ್ರಿವಾಲ್ ಅವರು ರಾಜ್ ಘಾಟ್‌ನಲ್ಲಿರುವ ಮಹಾತ್ಮಗಾಂಧಿ ಸ್ಮಾರಕಕ್ಕೆ ಭೇಟಿ ನೀಡಿದರು. ಅವರ ಜೊತೆ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಹಾಗೂ ದೆಹಲಿಯ ಕೆಲ ಸಚಿವರು ಉಪಸ್ಥಿತರಿದ್ದರು. ಕೇಜ್ರಿವಾಲ್‌ಗೆ ಸಮನ್ಸ್ ಕಳಿಸಿದ್ದನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಆಮ್ ಆದ್ಮಿ ಪಾರ್ಟಿಯ ಕೆಲ ನಾಯಕರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಮಾನ್ ಸಹ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಪಕ್ಷದ ನಾಯಕರನ್ನು ವಶಕ್ಕೆ ತೆಗೆದುಕೊಳ್ಳುವ ಮುಂಚೆ ಅವರು ಸ್ಥಳದಿಂದ ತೆರಳಿದರು.

# ಬನ್ನಿಕೋಡು ತಲುಪಿದ ಶಿವಶಂಕರ್ ಪಾದಯಾತ್ರೆ

ಮಲೇಬೆನ್ನೂರು, ಏ.16- ಮಾಜಿ ಶಾಸಕ, ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಅವರ ಪಾದಯಾತ್ರೆ ಭಾನುವಾರ ಬೆಳಿಗ್ಗೆ ಮಲೇಬೆನ್ನೂರಿನಿಂದ ಆರಂಭವಾಗಿ ರಾತ್ರಿ ಬನ್ನಿಕೋಡು ತಲುಪಿತು.

ಬೆಳಿಗ್ಗೆ ಮಲೇಬೆನ್ನೂರಿನ ಹಬೀಬುಲ್ಲಾ ಷಾ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಶಿವಶಂಕರ್ ಅವರು ಕಾಳಿಕಾದೇವಿ, ಬಸವೇಶ್ವರ ಮತ್ತು ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ವೀರಭದ್ರೇಶ್ವರ ದೇವಸ್ಥಾನದಲ್ಲಿ ಮಂಗ ಳಾರತಿ ವೇಳೆ ವೀರಭದ್ರೇಶ್ವರ ಸ್ವಾಮಿ ಬಲಗಡೆ ಯಿಂದ ಹೂವು ಪ್ರಸಾದ ನೀಡಿತು. ಇದು ಶುಭ ಸೂಚನೆ ಎಂದು ಅರ್ಚಕರು ಅರ್ಥೈಸಿದರು.

ನಂತರ ಜಿಗಳಿ, ಯಲವಟ್ಟಿ, ಲಕ್ಕಶೆಟ್ಟಿಹಳ್ಳಿ, ಭಾನು ವಳ್ಳಿ, ಎಕ್ಕೆಗೊಂದಿ, ಬ್ಯಾಲದಹಳ್ಳಿ ಮಾರ್ಗವಾಗಿ ರಾತ್ರಿ 8 ಗಂಟೆ ಸುಮಾರಿಗೆ ಬನ್ನಿಕೋಡು ತಲುಪಿ, ಅಲ್ಲಿಯೇ ತಂಗಿದ್ದಾರೆ. ಇವತ್ತೂ ಕೂಡಾ ಎಲ್ಲಾ ಕಡೆ ಮಹಿಳೆಯರು ಶಿವಶಂಕರ್ ಅವರಿಗೆ ಆರತಿ ಬೆಳಗಿ ಸ್ವಾಗತಿಸಿದರು.



ಸೋಮವಾರ ಬೆಳಿಗ್ಗೆ ಬನ್ನಿಕೋಡಿನಲ್ಲಿರುವ ಮಾಜಿ ಸಚಿವರಾದ ಹೆಚ್. ಶಿವಪ್ಪನವರ ಸಮಾಧಿಗೆ ಪೂಜೆ ಸಲ್ಲಿಸಿ, ನಂತರ ಷಂಷೀಪುರ ಕ್ರಾಸ್, ಹನಗವಾಡಿ, ಬೈಪಾಸ್ ಮಾರ್ಗವಾಗಿ ಹರಿಹರಕ್ಕೆ ತೆರಳಿ ಅಲ್ಲಿ ಬೃಹತ್ ಮೆರವಣಿಗೆ ಮೂಲಕ ತಾಲ್ಲೂಕು ಕಛೇರಿಗೆ ಹೋಗಿ ಶಿವಶಂಕರ್ ನಾಮಪತ್ರ ಸಲ್ಲಿಸಲಿದ್ದಾರೆಂದು ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಮುಖಂಡರಾದ ಹೆಚ್.ಎಸ್. ಅರವಿಂದ್, ಹಿಂಡಸಘಟ್ಟ ಮುರುಗೇಶ್, ಬಂಡೇರ್ ತಿಮ್ಮಣ್ಣ, ಸೈಯದ್ ಖಾಲಿದ್, ಎಂ.ಬಿ. ಗುಲ್ಜಾರ್, ಸಿ. ಅಬ್ದುಲ್ ಹಾದಿ, ಯೂಸೂಫ್, ಜಿಯಾವುಲ್ಲಾ, ಹಬೀಬ್, ಮಹಾಲಿಂಗಪ್ಪ, ಎಂ.ಆರ್. ಮಹಾದೇವಪ್ಪ, ಹೊಸಳ್ಳಿ ಕರಿಬಸಪ್ಪ, ಕುಂಬಳೂರಿನ ಎನ್. ಲೋಕೇಶ್, ನಿಟ್ಟೂರಿನ ಸಂಜೀವಮೂರ್ತಿ, ಬಸವನಗೌಡ, ದೇವರಾಜ್, ಯಲವಟ್ಟಿಯ ಮಹೇಂದ್ರಪ್ಪ, ನರಸಪ್ಪ, ರಾಮಚಂದ್ರಪ್ಪ, ಜಿಗಳಿಯ ಗೌಡ್ರ ಬಸವರಾಜಪ್ಪ, ಕೆ.ಆರ್. ರಂಗಪ್ಪ, ಬನ್ನಿಕೋಡ್ ನಾಗರಾಜಪ್ಪ, ಜಿ.ಎಂ. ಆನಂದಪ್ಪ, ಎಂ.ವಿ. ನಾಗರಾಜ್, ಡಾ. ನಾಗರಾಜ್, ವೈ. ರುದ್ರಗೌಡ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಕಾಂಗ್ರೆಸ್, ಜೆಡಿಎಸ್, ಬಿಜೆಪಿಯಿಂದ ನಾಮಪತ್ರ ಸಲ್ಲಿಕೆ






**ರಾಣೇಬೆನ್ನೂರು**

ರಾಣೇಬೆನ್ನೂರು, ಏ. 16 - ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲಿರುವ ವಿವಿಧ ಪಕ್ಷಗಳ ಹಾಗೂ ಪಕ್ಷೇತರರು ತಮ್ಮ ಅಪಾರ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಲಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಕೋಳಿವಾಡ ಅವರು ನಾಡಿದ್ದು ದಿನಾಂಕ 18 ರ ಮಂಗಳವಾರ ಎಪಿಎಂಸಿ ಗಣೇಶ ದೇವಸ್ಥಾನದಿಂದ ಹೊರಟು ಪೋಸ್ಟ್ ಸರ್ಕಲ್, ಎಂ.ಜಿ.ರಸ್ತೆ, ಕುರುಬಗೇರಿ ಕ್ರಾಸ್ ಹಾಯ್ದು ತಹಶೀಲ್ದಾರ್ ಕಛೇರಿಯಲ್ಲಿ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸುವರು.

ಜೆಡಿಎಸ್ ಅಭ್ಯರ್ಥಿ ಮಂಜುನಾಥ ಗೌಡ ಶಿವಣ್ಣನವರ ಅವರು ದಿನಾಂಕ 18ರ ಮಂಗಳವಾರ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟು ಬಸ್ ಸ್ಟ್ಯಾಂಡ್, ಪೋಸ್ಟ್ ಸರ್ಕಲ್, ಎಂ.ಜಿ.ರಸ್ತೆ, ಕುರುಬಗೇರಿ ಕ್ರಾಸ್ ಹಾಯ್ದು ತಹಶೀಲ್ದಾರ್ ಕಛೇರಿಯಲ್ಲಿ ನಾಮಪತ್ರ ಸಲ್ಲಿಸುವರು.

ನ್ಯಾಶನಲ್ ಕಾಂಗ್ರೆಸ್ ಪಕ್ಷದ ಆರ್.ಶಂಕರ್ ನಾಳೆ ದಿನಾಂಕ 17 ರಂದು ಸಾಂಕೇತಿಕವಾಗಿ ಸಲ್ಲಿಸಿ ದಿನಾಂಕ 19 ರಂದು ತಮ್ಮ ಬೆಂಬಲಿಗರೊಂದಿಗೆ ಕೆಇಬಿ ಗಣೇಶ ದೇವಸ್ಥಾನದಿಂದ ಮೆರವಣಿಗೆ ಮೂಲಕ ತೆರಳಿ ತಹಶೀಲ್ದಾರ್ ಕಛೇರಿಯಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ.

ಬಂಡಾಯ ಬಿಜೆಪಿಯ ಪಕ್ಷೇತರ ಅಭ್ಯರ್ಥಿ ಸಂತೋಷ ಪಾಟೀಲ ಅವರು ದಿನಾಂಕ 17 ರಂದು ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿ ದಿನಾಂಕ 19 ರಂದು ತಮ್ಮ ಅಪಾರ ಪ್ರಮಾಣದ ಬೆಂಬಲಿಗರೊಂದಿಗೆ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟು ನಗರದ ಪ್ರಮುಖ ರಸ್ತೆಗಳ ಮೂಲಕ ಹಾಯ್ದು ತಹಶೀಲ್ದಾರ್‌ರ ಕಛೇರಿಯಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ.

# ಕಾಂಗ್ರೆಸ್‌ಗೆ ಮತ ನೀಡಿ, ಅಭಿವೃದ್ಧಿ ನಮಗೆ ಬಿಡಿ

## 31ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಮತ ಯಾಚನೆ

ದಾವಣಗೆರೆ, ಏ.16- ಕಾಂಗ್ರೆಸ್ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದಾವಣಗೆರೆ ನಗರದ 31ನೇ ವಾರ್ಡ್‌ನ ಎಸ್.ಓ.ಜಿ.ಕಾಲೋನಿ, ರಾಮನಗರ ಸೇರಿದಂತೆ ವಿವಿಧ ಕಡೆಗಳಲ್ಲಿ ಮನೆ-ಮನೆಗೆ ತೆರಳಿ ಮತ ಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಮತದಾರರನ್ನುದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ 10 ಕೆ.ಜಿ.ಅಕ್ಕಿ, 200 ಯುನಿಟ್ ವಿದ್ಯುತ್, ಪ್ರತಿ ಮನೆಗೆ 2 ಸಾವಿರ ರೂ. ಹಾಗೂ ನಿರುದ್ಯೋಗಿ ಯುವಕ-ಯುವತಿಯರಿಗೆ ಮೂರು ಸಾವಿರ ರೂ. ನೀಡಲಾಗುವುದು ಎಂದು ಮಲ್ಲಿಕಾರ್ಜುನ್ ಹೇಳಿದರು.

ಯಾವುದೇ ಶಾಶ್ವತ ಯೋಜನೆ ಮಾಡದೇ ಬರೀ ಭ್ರಷ್ಟಾಚಾರ ನಡೆಸಿದ್ದಾರೆ. ದಾವಣಗೆರೆಯಲ್ಲಿ ಬಿಜೆಪಿಯವರು ಇಂದಿಗೂ ಒಂದೇ ಒಂದು ಮನೆ ನೀಡಿಲ್ಲ. ನಾವೆಲ್ಲ ನೆಮ್ಮದಿಯ ಜೀವನ ನಡೆಸಬೇಕಾಗಿದೆ. ಎಲ್ಲರನ್ನೂ ಸಮನಾಗಿ ಕಾಣುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಲು ಮನವಿ ಮಾಡಿದ ಅವರು ಅಭಿವೃದ್ಧಿ ಕೆಲಸ ನನಗೆ ಬಿಡಿ ಎಂದರು.



ಮತಯಾಚನೆ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಕಾಂಗ್ರೆಸ್ ಮುಖಂಡರಾದ ರವಿ ಇಳಂಗೋವನ್, ಅಕ್ಕಿರಾಜು, ಶೈಲಾ ನಾಗರಾಜ್, ಉಮಾಕುಮಾರ್, ಶ್ರೀಮತಿ ಸಂಗೀತಾ, ಅನಿತಾಬಾಯಿ ಮಾಲತೇಶ್, ಶುಭಮಂಗಳ, ಎಸ್.ಎಂ.ರುದ್ರೇಶ್, ಕೆ.ಜಿ.ಪ್ರಕಾಶ್, ಬಸವರಾಜ್ ಆರ್., ಕಾಂತರಾಜ್, ಸಂತೋಷ (ಚಾಕಲೇಟ್), ರವಿ (ಅಂಕಲ್) ಪ್ರಕಾಶ್ ಮುದ್ದೆ, ಗಿರೀಶ್ ಅಂಗಡಿ, ವೆಂಕಟೇಶ್ ಹದಡಿ, ಗುರುಶಾಂತಪ್ಪ, ತರಕಾರಿ ಮಂಜುನಾಥ, ಚಲುವರಾಜು, ನಾಗರಾಜ್ ಸೊಪ್ಪಿನ್, ಶಿವಣ್ಣ, ಗೋಪಿ, ಕರಿಯಪ್ಪ, ಲಕ್ಷ್ಮಣ್, ಉಮಾಪತಿ, ಇನಾಯತ್ ಅಹ್ಮದ್, ಮುಬಾರಕ್, ರುದ್ರಣ್ಣ, ವಾಸೀಂ ಅಕ್ರಂ ಮತ್ತಿತರರು ಉಪಸ್ಥಿತರಿದ್ದರು.

# 2011ರ ಜಾತಿ ಗಣತಿ ಬಹಿರಂಗಕ್ಕೆ ಮೋದಿಗೆ ರಾಹುಲ್ ಸವಾಲು



ಕೋಲಾರ, ಏ. 16 – 2011 ರ ಜಾತಿ ಆಧಾರಿತ ಗಣತಿಯ ಮಾಹಿತಿಯನ್ನು ಬಹಿರಂಗ ಪಡಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸವಾಲು ಹಾಕಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಶೇ.50 ರ ಮೀಸಲಾತಿ ಮೇಲಿನ ಮಿತಿಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರದ ಕಾರ್ಯಾಲಯದಲ್ಲಿ ಕೇವಲ ಶೇ.7ರಷ್ಟು ಹಿಂದುಳಿದ ವರ್ಗಗಳು, ದಲಿತರು ಹಾಗೂ ಬುಡಕಟ್ಟು ಅಧಿಕಾರಿಗಳಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಜಾತಿ ಗಣತಿ ನಡೆಸಲಾಗಿತ್ತು. ಜಾತಿ ಹೊರತು ಪಡಿಸಿ ಉಳಿದ ಮಾಹಿತಿಯನ್ನು ಪ್ರಕಟಿಸಲಾಗಿತ್ತು. ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಮೀಸಲಾತಿಯ ಮೇಲೆ ಶೇ.50 ರ ಮಿತಿ ಇದೆ. ಆದರೆ, ಕೆಲ ರಾಜ್ಯಗಳು ಈ ಮಿತಿಯನ್ನು ದಾಟಿ ಮೀಸಲಾತಿ ಹೊಂದಿವೆ.

ಇತರೆ ಹಿಂದುಳಿದ ವರ್ಗ, ದಲಿತ ಹಾಗೂ ಬುಡಕಟ್ಟು ಜನರು ಎಷ್ಟಿದ್ದಾರೆ ಎಂಬುದನ್ನು ದೇಶದ ಜನರಿಗೆ ತಿಳಿಸಬೇಕು ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೋಲಾರದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

# ಲೋಕೇಶ್ ಕಾಂಗ್ರೆಸ್‌ಗೆ ಸೇರ್ಪಡೆ

**(1ನೇ ಪುಟದಿಂದ)** ಈ ಹಿಂದೆ ಕಾಂಗ್ರೆಸ್‌ನಲ್ಲೇ ಇದ್ದ ಲೋಕೇಶ್, ಬಿಜೆಪಿ ಸೇರಿ ದಾವಣಗೆರೆ ದಕ್ಷಿಣ ಬಿಜೆಪಿ ಅಭ್ಯರ್ಥಿಯಾಗಿ ವಿಧಾನಸಭೆಗೆ ಸ್ಪರ್ಧಿಸಿದ್ದನ್ನು ಇಲ್ಲಿ ಸ್ಮರಿಸಬಹುದು. 'ನನ್ನ ದೇಹ ಮಾತ್ರ ಬಿಜೆಪಿಯಲ್ಲಿತ್ತು, ಮನಸ್ಸು ಕಾಂಗ್ರೆಸ್‌ನಲ್ಲೇ ಇತ್ತು' ಎಂದು ಅವರು ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಜೊತೆ ಮಾತನಾಡುತ್ತಾ ಹೇಳಿದರು. ಇದೀಗ ಕಾಂಗ್ರೆಸ್ ಸೇರಿರುವ ಲೋಕೇಶ್ ಅವರನ್ನು ಶೀಘ್ರದಲ್ಲೇ ನಡೆಯುವ ಕಾರ್ಯಕ್ರಮವೊಂದರಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರ ಸಮ್ಮುಖದಲ್ಲಿ ಸ್ವಾಗತಿಸಲಾಗುವುದು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

# ಮಳೆಗಾಗಿ ದುಗ್ಗಮ್ಮ ಗುಡಿ ಬಳಿ ವಾರದ ಸಂತೆ ನಡೆಸಲು ಜೆ.ಸೋಮನಾಥ್ ಮನವಿ

ದಾವಣಗೆರೆ,ಏ.16- ಯುಗಾದಿ ಕಳೆದು ತಿಂಗಳಾಗುತ್ತಾ ಬಂದರೂ ನಗರದಲ್ಲಿ ಮಳೆ ಬಾರದೇ ಸೂರ್ಯನ ಪ್ರಖರತೆ ಹೆಚ್ಚಾಗಿ ರಣ-ರಣ ಬಿಸಿಲಲ್ಲಿ ಬೇಯುವಂತಾಗಿದೆ. ಹಿರಿಯ ನಾಗರಿಕರಂತೂ ಬಸವಳಿದಿದ್ದಾರೆ. ಆದಕಾರಣ ವರುಣನ ಕೃಪೆಗಾಗಿ ನಗರದೇವತೆ ದುಗ್ಗಮ್ಮ ತಾಯಿಯ ಮೊರೆಹೋಗಲು ಪದ್ಧತಿಯಂತೆ ಮೂರು ವಾರ ದೇವಸ್ಥಾನದ ಬಳಿ ಸಂತೆ ನಡೆಸಬೇಕು ಎಂದು ಸಾಮಾಜಿಕ ಸೇವಾಕರ್ತ ಜೆ.ಸೋಮನಾಥ್ ಅವರು ಮಹಾನಗರ ಪಾಲಿಕೆ ಅಧ್ಯಕ್ಷರು, ಆಯುಕ್ತರನ್ನು ಕೋರಿದ್ದಾರೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಕುರಿಪೆಲ್ಯ ಸೀತಮ್ಮ ದಿ. ಕುರಿಪೆಲ್ಯ ಸತ್ಯನಾರಾಯಣ ಇವರ ಜ್ಞಾಪಕಾರ್ಥವಾಗಿ ಕೆ.ಟಿ ರಾಜೇಶ್ವರರಾವ್, ಹೊಸಹಳ್ಳಿ ಕ್ಯಾಂಪ್, ಚನ್ನಗಿರಿ ತಾಲ್ಲೂಕು, ಇವರುಗಳ ಸೇವಾರ್ಥ.

**ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಆಂಜನೇಯ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ
30x50 West, 30x42, South, 30x40 West, 30x38 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಪಿಯುಸಿ ಪಾಸಾಗಿರುವವರು ಬೇಕಾಗಿದ್ದಾರೆ. ಬಯೋಡೇಟಾದೊಂದಿಗೆ
ಸಂಪರ್ಕಿಸಿ : ನವೋದಯ ಚಿಟ್ ಫಂಡ್ಸ್
# 34, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಬಳಿ, ನಿಟುವಳ್ಳಿ ರಸ್ತೆ, ದಾವಣಗೆರೆ.

**3 BHK ಲೀಸ್ 10 ಲಕ್ಷ**
ಶಾಮನೂರ್ ಪೋದಾರ್ & ತಿಮ್ಮಾರೆಡ್ಡಿ ಸ್ಕೂಲ್ ಹತ್ತಿರ, ಪೂರ್ವ ದಿಕ್ಕು 1800 spft
ಗಾಳಿ, ಬೆಳಕು ಚೆನ್ನಾಗಿದೆ
93802 29199

**ಮನೆ ಬಾಡಿಗೆಗೆ ಇದೆ**
20x30 ಅಳತೆಯ ಮನೆ ಬಾಡಿಗೆಗೆ ಇದೆ. #696/19
ಶ್ರೀನಿವಾಸ್ ನಗರ 10ನೇ ಕ್ರಾಸ್ ಉತ್ತರ ಬಾಗಿಲು 2 ಬೆಡ್ ರೂಂ ನೀರು, ಬೋರ್ ನೀರು ಇದೆ.
98800 68009
ಸಸ್ಯಹಾರಿಗಳಿಗೆ ಮಾತ್ರ

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x50 ಪೂರ್ವ, 30x50 ಉತ್ತರ, 30x40 ಪಶ್ಚಿಮ, 30x40 ಪೂರ್ವ-ದಕ್ಷಿಣ ಕಾರ್ನರ್, 30x40 ಪಶ್ಚಿಮ-ದಕ್ಷಿಣ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹೊಸಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ**
40x43 East, 80x44 East, 30x40 West, 30x50 East, 30x50 West. 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
Receptionist -Female
ಮತ್ತು uPVC ವಿಂಡೋಸ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
9986413555

**ಮಳಿಗೆಗಳು ಬಾಡಿಗೆಗೆ ಇವೆ**
BK ಬಾರ್ & ರೆಸ್ಟೋರೆಂಟ್
ಮಿಲ್ಪ್ರಿ ಹೋಟೆಲ್‌ಗೆ ಮಳಿಗೆಗಳು ಬಾಡಿಗೆಗೆ ಇವೆ. ವಿಚಾರಿಸಿ.
ಫೋ. : 98441 01178

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.
ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
94838 62779

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಚೆಕ್ ಕಳೆದಿವೆ**
ಸಬ್ ರಿಜಿಸ್ಟರ್ ಆಫೀಸ್ ಬಳಿ ಬೈಕ್‌ನಲ್ಲಿ ಬರುವಾಗ ಎನ್ವಲಪ್ ಕವರ್‌ನಲ್ಲಿದ್ದ ಸಹಿ ಮಾಡಿರುವ ಚೆಕ್ ಕಳೆದಿವೆ. ದಿನಾಂಕ : 08.03.2023 ರಂದು ಮಧ್ಯಾಹ್ನ 2.00 ಗಂಟೆ ಸಮಯ. ಜೊತೆಗೆ ಹೊಲದ ರಸ್ತೆಯ ಬಗ್ಗೆ ಬರೆಸಿರುವ ಅಗ್ರಿಮೆಂಟ್ ಕಳೆದಿದೆ. ಸಿಕ್ಕವರು ಈ ನಂಬರಿಗೆ ಕರೆ ಮಾಡಿ. ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.
ಫೋನ್ : 86605 74131 (ಬಾಬು)

**EC / ಇಸಿ, E-swathu, Khatha Change Building Licence & Other Property Documents**
96118-66449

**WALK IN INTERVEIW**
Applications are invited for the followeing Post
• Social Science Teacher B.A., B.Ed.,
• Hindi Teacher B.A., B.Ed.,
• PE Teacher BP.Ed.,
For More details Contact
08192 - 297292
80738 45050
97432 96956

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೆಳ್ಳಿ ಪೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಪೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಸಿಲ್ವರ್ 999 ಬೆಳ್ಳಿ ಪೋಟೋಗಳು ರೂ. 95, 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಪೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಪೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, [illegible], ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ: 2 & 3 ರಂದು
ಬಸವರಾಜ ಲಾಡ್ಜ ಪಿ.ಬಿ. ರಸ್ತೆ.
ಡಾ|| ಎಸ್.ಆಯ್. ದೊಡ್ಡಮನಿ
ದಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**Learn For Future Career**
**ADVANCED EXCEL**
The Institute of Accounts & Tax Management (IATM), 2nd main, 6th cross, Ram & Co Circle, P.J. Exten, Davangere.
Call for more Information On Course
97438 06120, 98867 63469

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಮೊ. : 80504 03090

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಶನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**ಕೆಲಸಗಾರರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಇಡ್ಲಿ, ವಡ ಮಾಡಲು ಭಟ್ರು, (ಅನುಭವವುಳ್ಳ) ಕೆಲಸಗಾರರು ಬೇಕಾಗಿದ್ದಾರೆ.
7019469302

**ಅಡಿಕೆ ಸಸಿಗಳು ಮಾರಾಟಕ್ಕಿವೆ**
ಚನ್ನಗಿರಿಯ ಹಳೆ ತೋಟದ ಅಡಿಕೆ ಗೋಟು ಹಾಕಿ ಬೆಳೆಸಿದ 1 1/2 ವರ್ಷದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ಹಳೇಬಾತಿ.
99808 22722, 99865 02306

**ಬೇಕಾಗಿದ್ದಾರೆ**
ಮನಿಷ್ & ಶಿಫಾಲಿ ಸೆಕ್ಯೂರಿಟಿ ಸರ್ವೀಸ್ ಇಂಡಿಯಾ (ಪ್ರೈ) (ಲಿ)
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ.
ಆಕರ್ಷಕ ವೇತನದೊಂದಿಗೆ
98448 18900, 70227 92613

**HOUSE FOR RENT/LEASE**
1BHK, 2BHK, 3BHK Independent, Duplex Car Parking, Solar, Tap Water, Bore Water JH Patel, LIC Colony, Vidyanagar, SS Layout.
77955 06795
DAKSHITH IYNAHALLI

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್-1 (ಪುರುಷ)
ಸೆಕ್ಯೂರಿಟಿ ಗಾರ್ಡ್‌ಗಳು ದಾವಣಗೆರೆ ಸುತ್ತ-ಮುತ್ತ ಕೆಲಸ ಮಾಡಲು ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ESI & PF ಸೌಲಭ್ಯವಿರುತ್ತದೆ.
83100 43863, 86603 98210
63667 28552

**ಮನೆ ಮಾರಾಟಕ್ಕಿದೆ**
ಕೆ.ಬಿ. ಬಡಾವಣೆ ಕೆನರಾ ಬ್ಯಾಂಕ್ ರೋಡ್ ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿ ಮತ್ತು ಎರಡನೆಯ ಮಹಡಿಯಲ್ಲಿ ಕಲರ್ ಸೀಟ್ ಛಾವಣಿ ಹಾಕಿದ್ದು. ಅಳತೆ 15x45 ದಕ್ಷಿಣ ಮುಖವಿರುವ RCC ಮನೆ, ಮುನ್ಸಿಪಲ್ ನೀರು ಹಾಗೂ ವಿದ್ಯುತ್ ಸೌಕರ್ಯ ಹೊಂದಿದ್ದು ಆಸಕ್ತರು ಸಂಪರ್ಕಿಸಿ :
98440 25005

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) ಪಾರ್ಟ್ ಟೈಂ (ಫುಲ್ ಟೈಂ) ಆಫೀಸ್ ವರ್ಕ್ (ಟೆಲಿಕಾಲಿಂಗ್) ಪಾರ್ಟ್ ಟೈಂ (ಫುಲ್ ಟೈಂ) ಯಾವುದೇ ಶುಲ್ಕ ಇರುವುದಿಲ್ಲ.
ವೇತನ : 15000ದಿಂದ 30,000/-
ವಿದ್ಯಾರ್ಹತೆ : SSLC & Any Degree.
ಫೋ.: 90082 53595

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
78997 60749, 99726 75759

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಖರೀದಿ, ಅಡಮಾನ, ಸೈಟ್ ಖರೀದಿ ಮತ್ತು ಫೈನಾನ್ಸ್ ಕಂಪನಿಗಳ ಸಾಲ ನಮ್ಮ ಬ್ಯಾಂಕಿಗೆ ಸಾಲ ವರ್ಗಾವಣೆಗೆ ಇಂದೇ ಕರೆ ಮಾಡಿ (ಬಡ್ಡಿ ದರ ವಾರ್ಷಿಕ 8.5%)
ಫೋ. : 99455 22287

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಶಿವಸಂಗಮ ಚಿಟ್ಸ್ ಪ್ರೈ.ಲಿ., ಶಿವಸಂಗಮ ಫೈನಾನ್ಸ್ (ರಿ.)
ಸ್ಥಳ : ಡಾ|| ಬಿ.ಆರ್. ಶಿವಶಂಕರ್ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ.
ಶಾಖೆಗೆ ಸಂಪರ್ಕಿಸಿ : ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ
8197220933, 7353329440

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**2 BHK ಮನೆ ಬಾಡಿಗೆಗಿದೆ**
2 ಬೆಡ್ ರೂಂ ಮನೆ, 1ನೇ ಫ್ಲೋರ್ ಸಿದ್ದವೀರಪ್ಪ ಬಡಾವಣೆ, 10ನೇ ಕ್ರಾಸ್, ಪಶ್ಚಿಮ ಬಾಗಿಲು, # 3711/E, ಸಾಯಿಬಾಬಾ ನಿಲಯ, ಮುನ್ಸಿಪಲ್, ಬೋರ್ ನೀರಿನ ವ್ಯವಸ್ಥೆಯಿರುತ್ತದೆ.
6362 624711, 99648 58493

**ಮಾರ್ಕೆಟಿಂಗ್ & ಸೇಲ್ಸ್ (ಪುರುಷ) ಬೇಕಾಗಿದ್ದಾರೆ**
ಎಸ್.ಎಸ್. ಎಂಟರ್‌ಪ್ರೈಸಸ್, (ಡಿಸ್ಟ್ರಿಬ್ಯೂಷನ್ ಎಲ್‌ಇಡಿ & ಸಬ್‌ಮರ್ಸಿಬಲ್) ಕೆಆರ್. ರೋಡ್, ದಾವಣಗೆರೆ-1. ಯಾವುದೇ ಪದವಿಯೊಂದಿಗೆ ಅನುಭವವಿರುವವರಿಗೆ ಮೊದಲ ಆದ್ಯತೆ.
98447 29173, 70190 51379

## ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ



**ರಾಣೇಬೆನ್ನೂರು**

ರಾಣೇಬೆನ್ನೂರು, ಏ.16- ಸ್ಥಳೀಯ ಶ್ರೀ ಹಿರೇಮಠ ಸಂಸ್ಕೃತಿ ಸಂರಕ್ಷಣಾ ಸಮಿತಿ ವತಿಯಿಂದ ನಗರದ ಹೊರವಲಯದ ಶ್ರೀ ಶನೇಶ್ವರ ಸ್ವಾಮಿಯ ಬಯಲು ಆಲಯ ದ್ವಾದಶ ಪ್ರತಿಷ್ಠಾ ಮಹೋತ್ಸವದ ನಿಮಿತ್ತ ಲೋಕ ಕಲ್ಯಾಣಾರ್ಥ ಹಾಗೂ ಪ್ರಾಚೀನ ಧರ್ಮ ಪರಂಪರೆಯ ಸಂವರ್ಧನೆಗಾಗಿ ನಿರಂತರ 593 ದಿನಗಳ ಕಾಲ ಜರುಗುವ ಅಷ್ಟ ಬಂಧ ಬ್ರಹ್ಮ ಕಲಶೋತ್ಸವ, ಮಹಾತಪಸ್ವಿ ಶ್ರೀ ಸಿದ್ದಲಿಂಗ ಜಗದ್ಗುರುಗಳವರ ಪುಣ್ಯ ಸ್ಮರಣೋತ್ಸವ ಕಾರ್ಯ ಕ್ರಮದ ಅಂಗವಾಗಿ ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ಶಿವಾ ಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋ ತ್ಸವವು ಭಕ್ತರ ಮಧ್ಯ ಬಹು ಭಕ್ತಿಪೂರ್ವಕವಾಗಿ ಇಂದು ನೆರವೇರಿತು.

ಸ್ಥಳೀಯ ದೊಡ್ಡಪೇಟೆಯ ಬಸವೇಶ್ವರ ದೇವಸ್ಥಾನದಿಂದ ಮಹಿಳೆಯರ ಕುಂಭ ಮೇಳ, ಸಮಾಳ ಸೇರಿದಂತೆ ವೈವಿಧ್ಯಮಯ ವಾದ್ಯ ಮೇಳ ಗಳೊಂದಿಗೆ ಆರಂಭವಾದ ಮಹೋತ್ಸವವು ಹರ-ಗುರು-ಚರ ಮೂರ್ತಿಗಳೊಂದಿಗೆ ಅದ್ದೂರಿ ಯಾಗಿ ಜರುಗಿತು. ಶ್ರೀಮಠದ ಶಿವಯೋಗಿ ಶಿವಾ ಚಾರ್ಯ ಮಹಾಸ್ವಾಮಿಗಳು, ನಿಚ್ಚವ್ವನಹಳ್ಳಿಯ ಶಿವಯೋಗಿ ಶ್ರೀಗಳು, ನಾಗವಂದದ ಶ್ರೀ ಶಿವಾ ನಂದ ಸ್ವಾಮೀಜಿ, ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ, ಮಂಜುನಾಥ ಮಠಪತಿ, ಬಸವರಾಜ ಸವಣೂರ, ರವಿಂದ್ರಗೌಡ ಪಾಟೀಲ, ಹಾಲೇಶಪ್ಪ ಗೌಳಿ ಸೇರಿದಂತೆ ಮತ್ತಿತರರು ಇದ್ದರು.

# ಸಂಗೀತಾಸಕ್ತರು ಹೆಚ್ಚಾಗಿರುವುದು ದಾವಣಗೆರೆ ವಿಶೇಷತೆ

### 'ನಿನಾದ-8' ಸಂಗೀತ ಶಿಬಿರ ಉದ್ಘಾಟಿಸಿದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಆನಂದ್ ರಾವ್ ಪಾಟೀಲ್

ದಾವಣಗೆರೆ, ಏ.16- ಚಿಕ್ಕ ಮಕ್ಕಳಿಂದ ವೃದ್ಧರಾದಿಯಾಗಿ ಸಂಗೀತ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗವಹಿಸುವುದು ದಾವಣಗೆರೆಯ ವಿಶೇಷತೆ ಎಂದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಆನಂದ್ ರಾವ್ ಪಾಟೀಲ್ ಹೇಳಿದರು.

ಸುಶ್ರಾವ್ಯ ಸಂಗೀತ ವಿದ್ಯಾಲಯ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಭಾನುವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ನಾಡಿನ ಹಿರಿಯ ಸಾಹಿತಿ ಡಾ.ಹೆಚ್.ಎಸ್. ವೆಂಕಟೇಶಮೂರ್ತಿ ಅವರ ಗೀತ ಗಾಯನ ತರಬೇತಿ ಶಿಬಿರ 'ನಿನಾದ-8' ಉದ್ಘಾಟಿಸಿ ಅವರು ಮಾತನಾಡಿದರು.

ವಾಣಿಜ್ಯ ನಗರಿಯಾಗಿದ್ದ ದಾವಣಗೆರೆ ಇಂದು ವಿದ್ಯಾಕಾಶಿಯಾಗಿ ಬೆಳೆಯುತ್ತಿದೆ. ಸಂಗೀತದ ಆಸಕ್ತರೂ ಇಲ್ಲಿ ಹೆಚ್ಚಾಗಿದ್ದಾರೆ. ಕಲೆ, ಸಾಹಿತ್ಯ, ಸಂಗೀತವನ್ನು ಪ್ರೋತ್ಸಾಹಿಸುವವರು ಇದ್ದಾರೆ ಎಂದು ಹೇಳಿದರು.

ನಗರದಲ್ಲಿ ಸಂಗೀತ ಕ್ಷೇತ್ರದಲ್ಲಿ ಯಶಾ ದಿನೇಶ್ ಅವರ ಕೊಡುಗೆ ಹೆಚ್ಚಾಗಿದೆ. ಇಂತಹ ಶಿಬಿರಗಳನ್ನು ಏರ್ಪಡಿಸಿ, ಸಂಗೀತ ಕಲಿಸುತ್ತಾ ಕವಿಗಳನ್ನೂ ಪರಿಚಯಿಸುವ ಮೂಲಕ ಅವರು ಕಲೆ ಉಳಿಸಲು ಬದ್ಧರಾಗಿದ್ದಾರೆ ಎಂದು ಅವರು ಶ್ಲಾಘಿಸಿದರು.

ಹೆಚ್.ಎಸ್. ವೆಂಕಟೇಶಮೂರ್ತಿ ಅವರ 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ' ಹಾಡು ಹೇಳಿದ ಆನಂದ್ ರಾವ್ ಅವರು, ವೆಂಕಟೇಶ ಮೂರ್ತಿ ಅವರು ರಚಿಸಿರುವ ಹಲವಾರು ಹಾಡುಗಳು ಜನಪ್ರಿಯವಾಗಿವೆ. ಅವರೊಬ್ಬ ಅದ್ಭುತ ಕವಿಯಾಗಿದ್ದಾರೆ. ಅವರ ಕುರಿತು ಇಂದು ತಿಳಿದುಕೊಳ್ಳುತ್ತಿರುವ ಎಲ್ಲರೂ ಭಾಗ್ಯವಂತರು ಎಂದರು.



ಸುಶ್ರಾವ್ಯ ಸಂಗೀತ ವಿದ್ಯಾಲಯದ ನಿರ್ದೇಶಕರಾದ ಶ್ರೀಮತಿ ಯಶಾ ದಿನೇಶ್ ಮಾತನಾಡುತ್ತಾ, ಸಂಗೀತ ಕಲಿಸುವ ಜೊತೆಗೆ ಕವಿಗಳನ್ನು ಪರಿಚಯಿಸಿ ಜ್ಞಾನ ಹೆಚ್ಚಿಸಬೇಕೆಂಬ ನಿಟ್ಟಿನಲ್ಲಿ ನಿನಾದ ಶಿಬಿರ ಆರಂಭಿಸಲಾಗುತ್ತಿದೆ. ಇದು 8ನೇ ಶಿಬಿರವಾಗಿದ್ದು, ಪ್ರತಿ ಶಿಬಿರದಲ್ಲೂ ಒಬ್ಬ ಕವಿಯ ಪರಿಚಯ ಹಾಗೂ ಅವರ 10 ಹಾಡುಗಳನ್ನು ಕಲಿಸಲಾಗುತ್ತದೆ ಎಂದರು.

ಸುಗಮ ಸಂಗೀತ ಕ್ಷೇತ್ರವು ಸಿನಿಮಾ ಕ್ಷೇತ್ರದಷ್ಟೇ ಪ್ರಸಿದ್ಧವಾಗಿರುವುದು ಕರ್ನಾಟಕದಲ್ಲಿ ಮಾತ್ರ. ಭಾವಗೀತೆಗಳಿಗೆ ರಾಗ ಸಂಯೋಜಿಸಿ ಹಾಡುವ, ಭಾವಗೀತೆಗಳನ್ನು ಪ್ರೀತಿಸುವುದು ನಮ್ಮ ರಾಜ್ಯದಲ್ಲಷ್ಟೇ ಎಂದು ಯಶಾ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಮಾತನಾಡಿ, ರಜೆಗಳಲ್ಲಿ ಟಿವಿ ಹಾಗೂ ಮೊಬೈಲ್‌ಗಳಿಂದ ಮಕ್ಕಳನ್ನು ದೂರ ಇಡಲು ಪೋಷಕರು ಬೇಸಿಗೆ ಶಿಬಿರಗಳ ಮೊರೆ ಹೋಗುತ್ತಾರೆ. ಆದರೆ ಇಂತಹ ಸಂಗೀತ ಶಿಬಿರ ಪೋಷಕರ ಉತ್ತಮ ಆಯ್ಕೆ ಎಂದರು.

ಸುಜಾತ ಬಸವರಾಜ್, ಸುಮಾ ಗುರುಬಸಪ್ಪ ಉಪಸ್ಥಿತರಿದ್ದರು. ಚಂದ್ರಿಕಾ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರೆ, ವಿಜಯ ಚಂದ್ರಶೇಖರ್ ವಂದಿಸಿದರು.

# ಕಷ್ಟ-ಸುಖದಲ್ಲಿ ಭಾಗಿಯಾಗುವ ಎಸ್ಸೆಸ್‌ರನ್ನು ಗೆಲ್ಲಿಸಿ

### ದಕ್ಷಿಣ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪನವರ ಪರ ರೇಖಾ ಗಣೇಶ್ ಪ್ರಚಾರ



ದಾವಣಗೆರೆ, ಏ. 16- ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕ್ಷೇತ್ರದಲ್ಲಿ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಕಾರ್ಯ ನಡೆಸಿದ್ದು, ಕ್ಷೇತ್ರದ ಜನರ ಪ್ರತಿಯೊಂದು ಕಷ್ಟ - ಸುಖದಲ್ಲೂ ಭಾಗಿಯಾಗುವ ಅವರನ್ನು ಮತ್ತೊಮ್ಮೆ ಅತಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸುವಂತೆ ಅವರ ಸೊಸೆ ಶ್ರೀಮತಿ ರೇಖಾ ಗಣೇಶ್ ಮತದಾರರಲ್ಲಿ ಮನವಿ ಮಾಡಿದರು.

ಅವರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೆಳವನೂರು ಹಾಗೂ ಉಜ್ಜಿನಿಪುರ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪನವರ ಪರವಾಗಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡುತ್ತಾ, ಮತದಾರರನ್ನುದ್ದೇಶಿಸಿ ಮಾತನಾಡಿದರು.

ಮುಖಂಡರುಗಳಾದ ಜಿ.ಸಿ.ನಿಂಗಪ್ಪ, ತುರ್ಚಘಟ್ಟದ ಬಸವರಾಜಪ್ಪ, ತೆಂಗಿನಮರದ ಬಸವ ರಾಜಪ್ಪ, ಡಿ.ಮಲ್ಲೇಶಪ್ಪ, ಕೆ.ಎನ್.ಮಂಜುನಾಥ, ಬಿ.ದಿಳೆಪ್ಪ, ಬಿಸಲೇರಿ ಈರಣ್ಣ, ಮುದಹದಡಿ ಶಂಭಣ್ಣ, ಜರಿಕಟ್ಟೆಯ ಕಸ್ತೂರಪ್ಪ, ಆನಂದಪ್ಪ, ಆರನೇ ಕಲ್ಲು ಮಂಜಣ್ಣ, ಹನುಮಂತಪ್ಪ, ಹದಡಿಯ ರಮೇಶ್, ಮಹಾಂತೇಶ್, ಬೆಳವನೂರು ಮಾಲ ತೇಶ್, ಮಹೇಂದ್ರಪ್ಪ, ನವೀನ್ ಕುಮಾರ್ ಮತ್ತು ಇತರರು ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ್ದರು.

## ಉತ್ತರಕ್ಕೆ ಟಿಕೆಟ್ ನಿರಾಕರಣೆ : ಸಮಾನ ಮನಸ್ಕರ ಸಭೆ ನಡೆಸಿದ ಬಿ.ಎಸ್. ಜಗದೀಶ್



ದಾವಣಗೆರೆ, ಏ. 16 - ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಅವರ ನೇತೃತ್ವದಲ್ಲಿ ನಿನ್ನೆ ನಡೆದ ಸಮಾನ ಮನಸ್ಕರ ಸಭೆಯಲ್ಲಿ ಪಕ್ಷದ ಟಿಕೆಟ್ ತಪ್ಪಿದ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು.

ಉತ್ತರ ವಿಧಾನಸಭಾ ಕ್ಷೇತ್ರದ ನಾಯಕರ ವಿರುದ್ಧ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿ ಅನೇಕರು ಮಾತನಾಡಿ, ಪಕ್ಷದ ಸಂಘಟನೆ ಬಗ್ಗೆನೂ ಚರ್ಚಿಸಿ ದರು. ಪಕ್ಷ ಕೊಟ್ಟ ನಿರ್ಣಯಕ್ಕೆ ನಾವೆಲ್ಲರೂ ಬದ್ಧರಾಗಿರಬೇಕು ಪಕ್ಷಕ್ಕೋಸ್ಕರ ದುಡಿಬೇಕು. ಪಕ್ಷದ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯನ್ನುಗೆಲ್ಲಿಸುವ ನಿರ್ಣಯವನ್ನುತೆಗೆದುಕೊಳ್ಳಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಪಿ.ಎಸ್. ಜಯಣ್ಣ ವಹಿಸಿದ್ದು, ಮಾಜಿ ಮೇಯರ್ ವಸಂತ್ ಕುಮಾರ್, ಗುರುನಾಥ್, ಹೇಮಂತ್ ಕುಮಾರ್, ಮಂಡಲ ಮಾಜಿ ಅಧ್ಯಕ್ಷ ಮುಕುಂದ, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಮಹಾನಗರ ಪಾಲಿಕೆ ಸದಸ್ಯ ಮಂಜಾನಾಯ್ಕ್, ಸುರೇಶ್ ಗಂಡುಗಲಿ, ಶ್ರೀನಿವಾಸ್, ಗುಡ್ಡಪ್ಪ, ಚಂದ್ರನಾಯಕ್, ಪಿ.ಎಸ್. ಬಸವರಾಜ್, ಮಂಜುನಾಥ್ ಇನ್ನು ಮುಂತಾದ ಮುಖಂಡರು ಉಪಸ್ಥಿತರಿದ್ದರು

## ಬಿಜೆಪಿ ಅಲ್ಪಸಂಖ್ಯಾತರ ಸದಸ್ಯ ಮಜೀದ್ ಶೇಟ್ ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಏ.16- ಬಿಜೆಪಿಯ ಅಲ್ಪಸಂಖ್ಯಾತರ ಘಟಕದ ಸದಸ್ಯ ಮಜೀದ್ ಶೇಟ್ ಅವರು ಬಿಜೆಪಿ ತೊರೆದು ದಾವಣಗೆರೆ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಸಮ್ಮುಖದಲ್ಲಿ ಇಂದು ಕಾಂಗ್ರೆಸ್‌ಗೆ ಸೇರ್ಪಡೆಯಾದರು.

## ಕುಂದುವಾಡ ಬಸವೇಶ್ವರ ಕಾನ್ವೆಂಟ್ ಮಾನ್ಯತೆ ರದ್ದು

ದಾವಣಗೆರೆ, ಏ. 16- ಕುಂದುವಾಡ ಕೆ.ಹೆಚ್.ಬಿ. ಕಾಲೋನಿಯಲ್ಲಿರುವ ಶ್ರೀ ಬಸವೇಶ್ವರ ಕಾನ್ವೆಂಟ್ (ಕಿರಿಯ ಪ್ರಾಥಮಿಕ ಶಾಲೆ) ಶಾಲಾ ಮಾನ್ಯತೆ ರದ್ದು ಮಾಡಲಾಗಿದ್ದು, ಈ ಶಾಲೆಗೆ 2023-24 ನೇ ಸಾಲಿಗೆ ಮಕ್ಕಳನ್ನು ದಾಖಲು ಮಾಡಬಾರದು ಎಂದು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೋಷಕರಿಗೆ ಕರೆ ನೀಡಿದ್ದಾರೆ. ಅಲ್ಲದೇ, 1 ರಿಂದ 8 ರವರೆಗೆ (ಆಂಗ್ಲ ಮಾಧ್ಯಮ) ನೀಡಲಾಗಿದ್ದ ಶಾಲಾ ಮಾನ್ಯತೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

## ನೀತಿ ಸಂಹಿತೆ ನಂತರ 170 ಕೋಟಿ ಮೌಲ್ಯದ ಸರಕುಗಳ ವಶ

ಬೆಂಗಳೂರು ಏ. 16 – ಕರ್ನಾಟಕದಲ್ಲಿ ನೀತಿ ಸಂಹಿತೆ ಜಾರಿಯಾದ ನಂತರ, ಕಾನೂನು ಜಾರಿ ಸಂಸ್ಥೆಗಳು 170 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಸರಕುಗಳನ್ನು ವಶಪಡಿಸಿಕೊಂಡಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

71 ಕೋಟಿ ರೂ. ನಗದು ಸೇರಿದಂತೆ ಒಟ್ಟು 170.27 ಕೋಟಿ ರೂ. ಮೌಲ್ಯದ ಸರಕುಗಳನ್ನು ವಶಪಡಿಸಿಕೊಳ್ಳಲಾಗಿದೆ.

38 ಕೋಟಿ ರೂ. ಮೌಲ್ಯದ ಮದ್ಯ, 29 ಕೋಟಿ ರೂ. ಮೌಲ್ಯದ ಆಭರಣ, 19 ಕೋಟಿ ರೂ. ಮೌಲ್ಯದ ಉಚಿತ ಕೊಡುಗೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ಕುರಿತು 1,410 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ.

## ಯುಬಿಡಿಟಿ ಕಾಲೇಜಿನ ಪ್ರಾಚಾರ್ಯರಾಗಿ ಡಾ. ನಾಗರಾಜಪ್ಪ



ದಾವಣಗೆರೆ, ಏ.16- ನಗರದ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾಗಿ ಇದೇ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರೂ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರೂ ಆದ ಡಾ. ಡಿ.ಪಿ. ನಾಗರಾಜಪ್ಪ ನೇಮಕಗೊಂಡಿದ್ದಾರೆ. ಯುಬಿಡಿಟಿ ಕಾಲೇಜಿನ ಪ್ರಾಂಶುಪಾಲ ಡಾ. ಶಿವಪ್ರಸಾದ್ ದಂಡಗಿ ಬೆಳಗಾವಿ ಅವರು ಡಾ. ನಾಗರಾಜಪ್ಪ ಅವರಿಗೆ ನಾಳೆ ಸೋಮವಾರ ಅಧಿಕಾರ ಹಸ್ತಾಂತರಿಸಲಿದ್ದಾರೆ.

www.sparshhospital.com
SPARSH HOSPITAL
THE TOUCH OF LIFE
ಹೆಮಟಾಲಜಿ ಕ್ಲಿನಿಕ್
ಡಾ. ಮಹೇಶ್ ರಾಜಶೇಖರಯ್ಯ
MBBS, MD (Internal Medicine), DM (Clinical Haematology),
MRCP (The UK), Fellowship in BMT & Leukemia (Vancouver)
Head of Haematology and Bone Marrow Transplant Department
ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು
- ಅನೀಮಿಯಾ, ರಕ್ತದ ಹೆಚ್ಚಳ, ಕಡಿಮೆ ಹಾಗೂ ಅಧಿಕ ಪ್ಲೇಟ್ಲೆಟ್ ಕೌಂಟ್, ಕಡಿಮೆ ಹಾಗೂ ಅಧಿಕ ಬಿಳಿ ರಕ್ತಕಣಗಳ ಕೌಂಟ್, ಲ್ಯೂಕೇಮಿಯಾ, ಲಿಂಫೋಮ, ಮಲ್ಟಿಪಲ್ ಮೈಲೋಮ, ರಕ್ತಸ್ರಾವ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಗಳು
- ಮಕ್ಕಳಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟೋಲೊಜಿ ಸಮಸ್ಯೆಗಳು (ಥಲಸ್ಸೆಮಿಯ ಸೇರಿದಂತೆ), ರಕ್ತಸ್ರಾವದ ಸಮಸ್ಯೆಗಳು, ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಗಳು, ಇಮ್ಯುನೊಡಿಫಿಷಿಯನ್ಸಿ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ ಇತರ ಅಂಗಾಂಗಗಳ ಕ್ಯಾನ್ಸರ್ ಹೊಂದಿರುವವರು.
- ಪುನರಾವರ್ತಿತ ಗರ್ಭಪಾತ ಸೇರಿದಂತೆ ಗರ್ಭಿಣಿಯರು ಮಹಿಳೆಯರಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟಾಲೋಜಿ ಸಮಸ್ಯೆಗಳು, ಡಿವಿಟಿ, ಅನೀಮಿಯಾ, ಕಡಿಮೆ ಪ್ಲೇಟ್ಲೆಟ್ ಹೊಂದಿರುವವರು, ಮಹಿಳೆಯರಲ್ಲಿ ರಕ್ತಸ್ರಾವದ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ, ಎಪಿ ಎಲ್ಎ ಸಿಂಡ್ರೋಮ್.
ನೋಂದಣಿಗಾಗಿ ಕರೆಮಾಡಿ:
89519 91304 / 081922 22292
ದಿನಾಂಕ: ಬುಧವಾರ, 19ನೇ ಏಪ್ರಿಲ್ 2023
ಸ್ಥಳ : ಅನುಗ್ರಹ ಆಸ್ಪತ್ರೆ, ಎಂ ಸಿ ಸಿ, ಬಿ ಬ್ಲಾಕ್, ದಾವಣಗೆರೆ | ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ
ಸೂಚನೆ: ವೈದ್ಯರು ಪ್ರತೀ ತಿಂಗಳ ಮೂರನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ

IT'S A TIME TO UPGRADE UR HOME!
Opens Today
FURNITURE EXPO
Venue:
Karnataka State Government Employees Samudaya Bhavan
Sri S Nijalingappa Badavane, Ring Road Circle, Davanagere
Date: 17th to 23rd April 2023
TIMING 10AM - 8.30PM
BiG SALE UP TO
PRODUCTS ON DISPLAY
ITALIAN DESIGNER SOFAS ◈ OFFICE FURNITURE ◈ CARPETS ◈ BEDROOM SETS
◈ WALL FRAMES ◈ MASSAGE CHAIRS ◈ MATTRESSES ◈ RECLINERS ◈ DINING SETS
◈ GARDEN FURNITURE ◈ ARTIFICIAL FLOWERS ◈ DECORATIVE ITEMS
◈ TEAKWOOD WOOD FURNITURES & MANY MORE ATTRACTIVE PRODUCTS
AMPLE CAR PARKING | COVID-19 PROTOCOL FOLLOWED AT VENUE | 91 95380 29326 | ENTRY FREE



ನಮ್ಮ ದಾವಣಗೆರೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ
VISHWAS
ವಿಶ್ವಾಸ್ ಲೈಫ್ ಕೇರ್
ಹೊರ ರೋಗಿಗಳ ವಿಭಾಗ (OPD) ಸೇವೆಗಳು ಪ್ರಾರಂಭವಾಗಿದೆ
ಸ್ತ್ರೀರೋಗ | ಕೀಲು ಮೂಳೆ
ಮಕ್ಕಳ ತಜ್ಞರು | ಜನರಲ್ ಮೆಡಿಸನ್
VISHWAS LIFE CARE
#298. Vidyarthi Bhavan Circle, Hadadi Road, DAVANAGERE -02.
e-mail : vishwaslifecare@gmail.com, Cell : 7580075866

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte